# ಮಾನಸ ಗಂಗೋತ್ರಿ

ದಸರಾ ವಿಶೇಷ ಸಂಚಿಕೆ

ಸಂಚಿಕೆ – 1 | ಸಂಪುಟ – 1 | 29 ಅಕ್ಟೋಬರ್ 2018 | ಪುಟಗಳು – 6


ನಾಡಹಬ್ಬ ಉದ್ಘಾಟಿಸಿದ ಇನ್ಫೋಸಿಸ್ ಅಧ್ಯಕ್ಷೆ ಡಾ.ಸುಧಾಮೂರ್ತಿ

## 408ನೇ ದಸರಾ ಮಹೋತ್ಸವಕ್ಕೆ ಅದ್ದೂರಿ ಚಾಲನೆ



ಮೈಸೂರಿನಲ್ಲಿ ಬುಧವಾರ ಸುಧಾಮೂರ್ತಿ ಅವರು ಚಾಮುಂಡೇಶ್ವರಿ ಉತ್ಸವ ಮೂರ್ತಿಗೆ ಪುಷ್ಪಾರ್ಚನೆ ಮಾಡಿ ದಸರೆಗೆ ಚಾಲನೆ ನೀಡಿದರು. ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿ, ಸಚಿವರಾದ ಜಯಮಾಲಾ, ಸಾ.ರಾ.ಮಹೇಶ್, ಸಚಿವರಾದ ರಾಜಶೇಖರ ಪಾಟೀಲ, ಜಿ.ಟಿ.ದೇವೇಗೌಡ, ಶಾಸಕ ಎಸ್.ಎ.ರಾಮದಾಸ್ ಇದ್ದಾರೆ.

ಮೈಸೂರು : ವಿಶ್ವವೇ ಎದುರು ನೋಡುತ್ತಿದ್ದ 408ನೇ ದಸರಾ ಮೈಸೂರಿನ ಚಾಮುಂಡಿ ಬೆಟ್ಟದ ನಮ್ಮ ಹೆಮ್ಮೆಯ ನಾಡ ಹಬ್ಬ ಮೈಸೂರು ದಸರಾ ಮಹೋತ್ಸವ–2018 ಅನಾವರಣಗೊಂಡಿತು.

ಚಾಮುಂಡಿ ಬೆಟ್ಟದಲ್ಲಿ ಬುಧವಾರ ನಾಡಹಬ್ಬ ದಸರಾ ಮಹೋತ್ಸವವನ್ನು ಇನ್ಫೋಸಿಸ್ ಪ್ರತಿಷ್ಠಾನದ ಅಧ್ಯಕರಾದ ಡಾ.ಸುಧಾಮೂರ್ತಿ ಅವರು, ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿ ಅವರ ಉಪಸ್ಥಿತಿಯಲ್ಲಿ ದಸರಾ ಮಹೋತ್ಸವವನ್ನು ಉದ್ಘಾಟಿಸಿದರು.

ಉದ್ಘಾಟಿಸಿ ಮಾತನಾಡಿದ ಡಾ. ಸುಧಾಮೂರ್ತಿ ಕೊಡಗು ಪ್ರವಾಹಕ್ಕೆ ಸಿಲುಕಿ ಅನೇಕರು ನಿರಾಶ್ರಿತರಾಗಿದ್ದಾರೆ. ಸರ್ಕಾರದಿಂದಲೇ ಮಾಡಲು ಎಲ್ಲವೂ ಸಾಧ್ಯವಿಲ್ಲ. ಸರ್ಕಾರದ ಜೊತೆ ಸೇರಿ ನಾವು ಕೆಲಸ ಮಾಡಬೇಕು. ಅದಕ್ಕಾಗಿ ಇನ್ಫೋಸಿಸ್ ವತಿಯಿಂದ ನಿರಾಶ್ರಿತರಿಗೆ ವಸತಿ ನಿರ್ಮಾಣಕ್ಕಾಗಿ 25ಕೋ. ರೂ.ನೀಡುವುದಾಗಿ ಪ್ರಕಟಿಸಿದರು. ಅವರು ಇದು ಕೊಡುಗೆಯಲ್ಲ ನಮ್ಮ ಕರ್ತವ್ಯ ಎಂದು ಹೇಳಿದರು.

ಪಂಪ ಹೇಳುವ ಹಾಗೆ ಕನ್ನಡವೆಂದರೆ ನನಗಿಷ್ಟ. ಮತ್ತೆ ಮತ್ತೆ ಕನ್ನಡ ನಾಡಿನಲ್ಲಿ ಹುಟ್ಟಬೇಕು . ಕನ್ನಡ ಅತ್ಯಂತ ಸುಂದರ, ಸುಲಲಿತ ಭಾಷೆ, 'ಕಳಿತ ಬಾಳೆಯ ಸಿಪ್ಪೆ ಸುಲಿದಂತೆ' ಎಂದು ಕವಿ ಮಹಾಲಿಂಗ ರಂಗರವರ ಕಗ್ಗ ಸ್ಮರಿಸಿ ಕರ್ನಾಟಕದ ಮುಖ್ಯಮಂತ್ರಿಗಳಿಗೆ ಕೃತಜ್ಞತೆಯನ್ನು ಅರ್ಪಿಸಿದರು. ಮೈಸೂರಿನ ದೊರೆಗಳಿಗೆ ನಾವು ಕೃತಜ್ಞರಾಗಿರಬೇಕು. ನಾಡಿನ ಅಭಿವೃದ್ಧಿಗೆ ಮೈಸೂರು ದೊರೆಗಳ ಕೊಡುಗೆ ಅಪಾರ. ಮೈಸೂರಿನ ಅರಸರು ಇಲ್ಲದಿದ್ದರೆ ನಮ್ಮ ಕರ್ನಾಟಕ ಹರಿದು ಹಂಚಿ ಹೋಗುತ್ತಿತ್ತು. ಕರ್ನಾಟಕ ಸರ್ಕಾರ ದಸರಾವನ್ನು ಉತ್ತಮವಾಗಿ ಆಚರಿಸಿಕೊಂಡು ಬರುತ್ತಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಇನ್ಫೋಸಿಸ್ ಸಂಸ್ಥಾಪಕ ನಾರಾಯಣಮೂರ್ತಿ, ಪುತ್ರಿ ಅಕ್ಷತಾ, ಸೋದರಿ ಸುನಂದಾ ಕುಲಕರ್ಣಿ, ಭಾವ ಶೀನಿವಾಸ ಕುಲಕರ್ಣಿ, ಮೊಮ್ಮಕ್ಕಳು ಸಭಿಕರ ಸಾಲಿನಲ್ಲಿ ಆಸೀನರಾಗಿದ್ದರು. ಮುಖ್ಯಮಂತ್ರಿ ಎಚ್.ಡಿ. ಕುಮಾರಸ್ವಾಮಿ, ಸಚಿವರಾದ ಜಿ.ಟಿ. ದೇವೇಗೌಡ, ಸಾ.ರಾ.ಮಹೇಶ್, ರಾಜಶೇಖರ ಬಸವರಾಜ್ ಪಾಟೀಲ್, ಜಯಮಾಲಾ, ಪ್ರತಾಪ್‌ಸಿಂಹ, ಶಾಸಕರಾದ ಎ.ಎಚ್.ವಿಶ ನಾಥ್, ಎಸ್.ಎ.ರಾಮದಾಸ್, ಎಲ್ ನಾಗೇಂದ್ರ ಅಶ್ವಿನ್‌ಕುಮಾರ್, ಟಿ.ಶ್ರೀಕಂಠೇಗೌಡ, ಕೆ. ಮಹದೇವು, ಮಾಜಿ ಮಹಾಪೌರ ಎ.ಜೆ. ರವಿಕುಮಾರ್, ಮೈಮುಲ್ ನಿರ್ದೇಶಕ ಎ.ಟಿ. ಸೋಮಶೇಖರ್, ಆಗಮಿಕ ಶಶಿಶೇಖರ ದೀಕ್ಷಿತ್ ಮೊದಲಾದವರು ಈ ಸಂದರ್ಭದಲ್ಲಿ ಹಾಜರಿದ್ದರು.

## ಕಣ್ಮನ ಸೆಳೆದ ಜಂಬೂಸವಾರಿ ವೈಭವ



ಚಿನ್ನದ ಅಂಬಾರಿ ಹೊತ್ತು ಸಾಗುತ್ತಿರುವ ಅರ್ಜುನ ಬಲ ಭಾಗದಲ್ಲಿ ಕಾವೇರಿ, ಎಡ ಭಾಗದಲ್ಲಿ ವರಲಕ್ಷ್ಮಿ ಆನೆ ಬೆಂಬಲವಾಗಿ ಸಾಗಿದವು.

**ಅಕ್ಷತಾಕುಮಾರಿ.ಬಿ.**

ಮೈಸೂರು: ವಿಶ್ವವಿಖ್ಯಾತ ದಸರಾ ಆಚರಣೆಯ ಪ್ರಮುಖ ಆಕರ್ಷಣೆಯಾದ ಜಂಬೂಸವಾರಿಗೆ ಲಕ್ಷಾಂತರ ಮಂದಿ ಸಾಕ್ಷಿಯಾದರು. ಚಿನ್ನದ ಅಂಬಾರಿಯಲ್ಲಿ ಪ್ರತಿಷ್ಠಾಪಿಸಿದ್ದ ಚಾಮುಂಡೇಶ್ವರಿ ಉತ್ಸವ ಮೂರ್ತಿಗೆ ನಮಿಸುವ ಮೂಲಕ ಕಣ್ತುಂಬಿಕೊಂಡರು. ಜಂಬೂಸವಾರಿ ಮೆರವಣಿಗೆ ಬನ್ನಿಮಂಟಪದಲ್ಲಿ ಅಂತ್ಯಗೊಳ್ಳುವ ಮೂಲಕ ಶುಕ್ರವಾರ ನವರಾತ್ರಿ ಉತ್ಸವಕ್ಕೂ ತೆರೆ ಬಿತ್ತು.

ಅರಮನೆ ಆವರಣದಲ್ಲಿ ಸಂಜೆ 4.13ಕ್ಕೆ ಕುಂಭ ಲಗ್ನದಲ್ಲಿ ಚಾಮುಂಡೇಶ್ವರಿ ಉತ್ಸವ ಮೂರ್ತಿಗೆ ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿ ಪುಷ್ಪಾರ್ಚನೆ ಮಾಡಿ ಜಂಬೂಸವಾರಿಗೆ ಚಾಲನೆ ನೀಡಿದರು. ಸಂಪ್ರದಾಯದಂತೆ ಅರಮನೆಯ ಬಲರಾಮ ದ್ವಾರದಲ್ಲಿ ನಂದಿ ಧ್ವಜ ಪೂಜೆ ನೆರವೇರಿದ ಕೆಲ ಸಮಯದಲ್ಲಿ ದಸರಾ ಮೆರವಣಿಗೆಯೂ ಚಾಲನೆ ಪಡೆದುಕೊಂಡಿತು. ಕಲಾ ತಂಡಗಳು, ಸ್ತಬ್ಧ ಚಿತ್ರಗಳು ಸಾಗಿದ ನಂತರ ಕೊನೆಯದಾಗಿ ಜಂಬೂಸವಾರಿಗೆ ಚಾಲನೆ ನೀಡಲಾಗುತ್ತದೆ. ಆದರೆ, ಈ ಸಲ ಮುಹೂರ್ತ ಮೀರುವುದನ್ನು ತಪ್ಪಿಸಲು ಮೆರವಣಿಗೆ ಮಧ್ಯದಲ್ಲೇ ಪುಷ್ಪಾರ್ಚನೆ ಮಾಡಲಾಯಿತು. ನಂದಿ ಧ್ವಜ ಪೂಜೆ ಹಾಗೂ ಜಂಬೂಸವಾರಿಗೆ ಚಾಲನೆ ನೀಡಲು ಮುಹೂರ್ತ ನಿಗದಿಯಾಗಿದ್ದ ಸಮಯದಲ್ಲಿ ಹೆಚ್ಚಿನ ಅಂತರ ಇರಲಿಲ್ಲ. ಅಂಬಾರಿ ಹೊತ್ತಿದ್ದ ಆನೆ ಮುಂದಕ್ಕೆ ಸಾಗುತ್ತಿದ್ದಂತೆ ಜನರೂ ಅರಮನೆಯಿಂದ ಹೊರ ನಡೆಯಲು ಆರಂಭಿಸಿದರು. 750 ಕೆ.ಜಿ. ತೂಕದ ಚಿನ್ನದ ಅಂಬಾರಿ ಹೊತ್ತ ಅರ್ಜುನ ಆನೆಗೆ ಬಲ ಭಾಗದಲ್ಲಿ ಕಾವೇರಿ, ಎಡ ಭಾಗದಲ್ಲಿ ವರಲಕ್ಷ್ಮಿ ಆನೆ ಬೆಂಬಲವಾಗಿ ಸಾಗಿದವು.

408ನೇ ದಸರಾ ಮಹೋತ್ಸವಕ್ಕೆ ಮೆರುಗು ನೀಡಿದ ವೈವಿಧ್ಯಮಯ ಜಾನಪದ ಕಲಾ ತಂಡಗಳು

## ಜನಮನ ಸೆಳೆದ ಸ್ತಬ್ಧಚಿತ್ರಗಳ ಮೆರವಣಿಗೆ

**ಆಶೀಕಾ.**

ಮೈಸೂರು: ವಿಜಯದಶಮಿ ಮೆರವಣಿಗೆ ನಾಡಿನ ಕಲೆ, ಸಂಸ್ಕೃತಿ, ನೆಲ–ಜಲ, ಕಲೆ, ಸಂಸ್ಕೃತಿ, ಸಾಹಿತ್ಯ, ಸಾಹಸ, ಕೃಷಿ ಮಾಹಿತಿ ಬಿಂಬಿಸುವ ಸ್ತಬ್ಧಚಿತ್ರಗಳು ಅನಾವರಣಗೊಂಡವು. ರಾಜ್ಯದ ವಿವಿಧ



ಪ್ರದೇಶಗಳ ಜನಪದ ಕಲಾ ತಂಡಗಳ ನೃತ್ಯ ವೈಭವ ಮೆರವಣಿಗೆಯನ್ನು ರಂಗೇರಿಸಿತು.

42 ಸ್ತಬ್ಧ ಚಿತ್ರಗಳು, 40 ವಿವಿಧ ಜನಪದ ಕಲಾತಂಡಗಳು, 10 ವಿಶೇಷ ಕಲಾ ತಂಡ, ಉತ್ತರ ಭಾರತದ ವಿವಿಧ ರಾಜ್ಯಗಳ 5 ಕಲಾ ತಂಡ ಜಂಬೂಸವಾರಿಯಲ್ಲಿ ಸಾಗಿದವು. 1,675 ಕಲಾವಿದರು ಸೇರಿದಂತೆ ಒಟ್ಟು 2 ಸಾವಿರ ಮಂದಿ ಭಾಗಿಯಾಗಿದ್ದರು.

'ಪ್ರವಾಹ ಸಂತ್ರಸ್ತರಿಗೆ ಪರಿಹಾರ' ಒದಗಿಸುವ ಎನ್‌ಸಿಸಿ ಸ್ತಬ್ಧಚಿತ್ರ ಸೊಗಸಾಗಿತ್ತು. 'ವಿಶ್ವವಿದ್ಯಾಲಯಗಳ ನಡೆದು ಬಂದ ದಾರಿ' ಕುರಿತ ಸ್ತಬ್ಧಚಿತ್ರ ಪ್ರಸ್ತುತಪಡಿಸಲಾಯಿತು. ಎಲ್‌ಇಡಿ ಪರದೆ ಮೇಲೆ 19 ವಿಶ್ವವಿದ್ಯಾಲಯಗಳ ಮಾಹಿತಿ ಬಿತ್ತರಿಸಲಾಯಿತು. ಕಿತ್ತೂರಿನ ಸ್ವಾತಂತ್ರ್ಯ ಸಂಗ್ರಾಮವನ್ನು ಬಿಂಬಿಸುವ ಸ್ತಬ್ಧಚಿತ್ರವನ್ನು ಬೆಳಗಾವಿ ಜಿ.ಪಂ ಸಾದರಪಡಿಸಿತು.

ತುಂಗಭದ್ರಾ ಜಲಾಶಯ, ಕೆಆರ್‌ಎಸ್ ಅಣೆಕಟ್ಟು, ಪ್ರವಾಸೋದ್ಯಮ, ಅರಣ್ಯದ ಕುರಿತ ಕಲಾಕೃತಿಗಳು ಸೊಬಗು ಬಿಚ್ಚಿಟ್ಟವು. ಈ ಬಾರಿಯೂ ಕರಾಟೆ ಪಟುಗಳಿಗೆ ಮೆರವಣಿಗೆಯಲ್ಲಿ ಅವಕಾಶ ನೀಡಿದ್ದು ವಿಶೇಷ. ಸಿದ್ಧಗಂಗಾ ಶಿವಕುಮಾರ ಸ್ವಾಮೀಜಿ ಅವರ ಸಾಧನೆಯನ್ನು ಸ್ತಬ್ಧಚಿತ್ರದ ಮೂಲಕ ತೆರೆದಿಡಲಾಯಿತು. ದಾವಣಗೆರೆ ಸ್ಮಾರ್ಟ್ ಸಿಟಿ, ದಕ್ಷಿಣ ಕನ್ನಡದ ಕೋಟಿ ಚೆನ್ನಯ್ಯ ತುಳುನಾಡ ವೀರರು, ಕಲಬುರ್ಗಿ ವಿಮಾನ ನಿಲ್ದಾಣ, ಹೊಯ್ಸಳ ನಾಡಿನ ಬೇಲೂರು ಶಿಲ್ಪಗಳ 900ರ ಸಂಭ್ರಮ, ವಿಧುರಾಶ್ವಥ ಪುಣ್ಯಕ್ಷೇತ್ರ ಗಮನ ಸೆಳೆದವು. ಕೊನೆಯಲ್ಲಿ ಪೊಲೀಸ್ ಬ್ಯಾಂಡ್‌ನ ಕರ್ನಾಟಕ ಶಾಸ್ತ್ರೀಯ ವಾದ್ಯ ತಂಡದವರು ವಾಹನದಲ್ಲಿ ಸಾಗಿದರು.

**ವಿಭಿನ್ನ ಕಲಾ ತಂಡಗಳು:** ವೈವಿಧ್ಯಮಯ ಕಲಾ ತಂಡಗಳು ಜನರ ಮನಸ್ಸಿಗೆ ಮುದ ನೀಡಿದವು. ಮಹಿಳಾ ಕಲಾವಿದರಿಗೆ ಈ ಬಾರಿ ಹೆಚ್ಚಿನ ಆದ್ಯತೆ ನೀಡಲಾಗಿತ್ತು. ಅವರು ಸುಂದರ ಪ್ರದರ್ಶನದ ಮೂಲಕ ತಮ್ಮ ಸಾಮರ್ಥ್ಯ ಪ್ರದರ್ಶಿಸಿದರು. ಕೊಂಬು ಕಹಳೆ, ಜಗ್ಗಲಗಿ ಮೇಳ, ತಮಟೆ ನಗಾರಿಯಲ್ಲಿ ಮಿಂಚಿದರು. ಮರಗಾಲು ಕುಣಿತ, ಗೊಂಡರ ಡಕ್ಕೆ, ಲಂಬಾಣಿ ನೃತ್ಯದ ಮೂಲಕ ಕಲಾವಿದರು ಸೊಬಗು ಬಿಚ್ಚಿಟ್ಟರು.





## ಕಾವೇರಿ ನೀರಾವರಿ ನಿಗಮದ ಸ್ತಬ್ಧಚಿತ್ರಕ್ಕೆ ಪ್ರಥಮ ಬಹುಮಾನ

**ಮನೋಜ್ & ಚಂದನ್**

ಮೈಸೂರು: ನಾಡಹಬ್ಬ ದಸರಾ ಅಂಗವಾಗಿ ಜಂಬೂ ಸವಾರಿಯಲ್ಲಿ ಭಾಗವಹಿಸಿದ್ದ ಕಾವೇರಿ ನೀರಾವರಿ ನಿಗಮದ ಸ್ತಬ್ಧಚಿತ್ರಕ್ಕೆ ಪ್ರಥಮ ಬಹುಮಾನ ಸಿಕ್ಕಿದೆ.

'ನಾವು ಜಲವನ್ನು ಉಳಿಸಿದರೆ, ಜಲವು ನಮ್ಮನ್ನು ಉಳಿಸುವುದು' ಪರಿಕಲ್ಪನೆಯಲ್ಲಿ ನಿರ್ಮಿಸಿದ್ದ ಸ್ತಬ್ಧಚಿತ್ರವು ತೀರ್ಪುದಾರರ ಮೆಚ್ಚುಗೆಗೆ ಪಾತ್ರವಾಯಿತು.ಪ್ರಥಮ ಬಹುಮಾನವಾಗಿ – 30 ಸಾವಿರ ನೀಡಲಾಗುವುದು.

ಚಿಕ್ಕಬಳ್ಳಾಪುರದ 'ವಿಧುರಾಶ್ವಥ ಪುಣ್ಯಕ್ಷೇತ್ರ' ಸ್ತಬ್ಧಚಿತ್ರಕ್ಕೆ ದ್ವಿತೀಯ, ಮಂಡ್ಯದ 'ಮಂಡ್ಯ ಜಿಲ್ಲೆಗೆ ನಾಲ್ವಡಿಯವರ ಪ್ರಮುಖ ಕೊಡುಗೆ (ಕೆ.ಆರ್.ಎಸ್. ಅಣೆಕಟ್ಟು)' ಸ್ತಬ್ಧಚಿತ್ರಕ್ಕೆ ತೃತೀಯ ಬಹುಮಾನ ದೊರಕಿತು. ಕ್ರಮವಾಗಿ – 20 ಸಾವಿರ, – 10 ಸಾವಿರ ನಗದು ಬಹುಮಾನ ನೀಡಲಾಗುವುದು ಎಂದು ಸ್ತಬ್ಧಚಿತ್ರ ಉಪಸಮಿತಿಯ ಅಧಿಕಾರಿಗಳು ತಿಳಿಸಿದರು.

**ಸಮಾಧಾನಕರ ಬಹುಮಾನ :** ಮೆರವಣಿಗೆಯಲ್ಲಿ ಮೊದಲ ಬಾರಿ ಭಾಗವಹಿಸಿದ ಎನ್‌ಸಿಸಿಯ 'ಪ್ರವಾಹ ಸಂತ್ರಸ್ತರಿಗೆ ನೆರವು ಮತ್ತು ಕ್ರೀಡೆಗಳು' ಹಾಗೂ ಧಾರವಾಡದ 'ದ. ರಾ.ಬೇಂದ್ರೆ ಕಂಡ ಸಾಂಸ್ಕೃತಿಕ ನಗರಿ – ಧಾರವಾಡ' ಸ್ತಬ್ಧಚಿತ್ರಗಳಿಗೆ ಸಮಾಧಾನಕರ ಬಹುಮಾನ ದೊರೆತಿದೆ. ಶೀಘ್ರವೇ ಕಾರ್ಯಕ್ರಮವನ್ನು ಆಯೋಜಿಸಿ ಬಹುಮಾನ ವಿತರಣೆ ಮಾಡಲಾಗುವುದು ಸ್ತಬ್ಧಚಿತ್ರ ಉಪಸಮಿತಿಯ ಅಧಿಕಾರಿಗಳು ಹೇಳಿದರು.



ಪ್ರಥಮ ಬಹುಮಾನ ಪಡೆದ ಕಾವೇರಿ ನೀರಾವರಿ ನಿಗಮದ ಸ್ತಬ್ಧಚಿತ್ರ



# ಹೂವು ಚೆಲುವೆಲ್ಲ ನಂದೆಂದಿತು .................!

**ಅಕ್ಷತಾಕುಮಾರಿ.ಬಿ**

ಮೈಸೂರು : ಎಲ್ಲೆಲ್ಲೂ ಗುಲಾಬಿ,ಸೇವಂತಿಗೆ ಸೇರಿದಂತೆ ತರಹೇವಾರಿ ಹೂವಿನ ಘಮಲು. ವಿವಿಧ ಬಗೆಯ ಹೂವುಗಳ ಆಕೃತಿಗಳು ನೋಡುಗರನ್ನು ಫೋಟೋ ಹಾಗೂ ಸೆಲ್ಫಿಗಾಗಿ ಮುಖವೊಡ್ಡಿ ನಿಲ್ಲುವಂತೆ ಪ್ರೇರೇಪಿಸಿದವು. ಕೆಲವರು ಫೇಸ್ ಬುಕ್ ಲೈವ್ ಕೂಡ ಮಾಡುತ್ತಿದ್ದರು.

ಬುಧವಾರ(10/10/2018) ತೋಟಗಾರಿಕಾ ಇಲಾಖೆ ವತಿಯಿಂದ ಕುಪ್ಪಣ್ಣ ಪಾರ್ಕನಲ್ಲಿ ಚಾಲನೆ ಪಡೆದ ದಸರೆ ಫಲಪುಷ್ಪ ಪ್ರದರ್ಶನದಲ್ಲಿ ಎಲ್ಲೆಲ್ಲೂ ವಿವಿಧ ಕಲಾಕೃತಿಗಳು ಪುಷ್ಪಗಳಿಂದ ಅಲಂಕೃತಗೊಂಡು ಪುಷ್ಪಪ್ರಿಯರ ಕಣ್ಮನ ತಣಿಸಿದವು. ಪ್ರಮುಖ ಪ್ರವೇಶದ್ವಾರದಲ್ಲಿ 'ನಿಮ್ಮೊಂದಿಗೆ ನಾವೆಲ್ಲರೂ' ಸಂದೇಶ ಸಾರುವ ಕೈ ಕೈ ಹಿಡಿದ ಕಲಾಕೃತಿಯೇ 10ಸಾವಿರಕ್ಕೂ ಹೆಚ್ಚು ಪುಷ್ಪಗಳಿಂದ ನಿರ್ಮಿತವಾಗಿತ್ತು. ಅದರ ಎತ್ತರ 8 ಅಡಿ. ಸೇವಂತಿಗೆಯಿಂದ ನಿರ್ಮಾಣವಾದ ಮರದ ಮನೆ 1ಲಕ್ಷ ಹೂಗಳಿಂದ ಸಿಂಗಾಗೊಂಡಿದ್ದು, ಅದರ ಮೆಟ್ಟಿಲುಗಳು ಕೊಡಗಿನ ಬೆಟ್ಟಗಳ ನಡುವೆ ಸಾಗುವ ದಾರಿಯಂತೆ ಬಳುಕಿ ನಿತಿದ್ದು ವಿಶೇಷ ಆಕರ್ಷಣೆಯಾಗಿತ್ತು. ಇನ್ನು ಹೂಗಳಿಂದ ಅಲಂಕೃತವಾದ ಎರಡು ಡಾಲ್ಫಿನ್ಗಳು ಫೋಟೋ ಪ್ರಿಯರ ನೆಚ್ಚಿನ ತಾಣವಾಗಿತ್ತು. ಪಾರ್ಕಿನ ಕಾಲುದಾರಿಯ ಎರಡು ಬದಿಯಲ್ಲು ಹೂವಿನ ಕುಂಡಗಳು ಘಮಲು ಸರ್ವಾಂತರ್ಯಾಮಿ. ಮತ್ತೊಂದು ದ್ವಾರದಲ್ಲಿ 1ಲಕ್ಷಕ್ಕೂ ಹೆಚ್ಚು ಸೇವಂತಿಗೆಯನ್ನು ಬಳಸಿ ಮೈಸೂರು ಅರಮನೆಯ ಬಲರಾಮದ್ವಾರ ನಿರ್ಮಿಸಲಾಗಿತ್ತು. ಅದರ ಮುಂದೆ ಕಾಮಿನಿ ಎಲೆಗಳನ್ನು ಬಳಸಿಕೊಂಡು 9 ಅಡಿಯ ಆನೆ



ಕಲಾಕೃತಿ ಕಂಗೊಳಿಸುತ್ತಿತ್ತು, ಮತ್ತೊಂದು ಪ್ರಮುಖ ಆಕರ್ಷಣೆಯೆಂದರೆ ಸಿರಿಧಾನ್ಯಗಳಿಂದ ನಿರ್ಮಿಸಿದ್ದ ನಾಲ್ವಡಿ ಕೃಷ್ಣರಾಜ ಒಡೆಯರ್, ಕಾವೇರಿಮಾತೆ, ಸರ್ ,ಎಮ್, ವಿಶ್ವೇಶ್ವರಯ್ಯ ಅವರ ಪ್ರತಿಮೆಗಳು ನೋಡುಗರನ್ನು ವಿಸ್ಮಯಗೊಳಿಸಿದ್ದಲ್ಲಿ ಆಶ್ಚರ್ಯವಿಲ್ಲ. ಅಶೋಕ ಸ್ತಂಭ, ಸಾರೋಟು ಎಳೆಯುತ್ತಿರುವ ಆನೆ, ಫಿರಂಗಿ ಗಾಡಿ , ನೃತ್ಯ ಗೊಂಬೆಗಳು ಹೀಗೆ ನೋಡಲು ಅನೇಕ ಪುಷ್ಪಸೃಷ್ಠಗಳು ಇದ್ದವು. ವಿವಿಧ ರೀತಿಯ ಕಲಾಕೃತಿಗಳೂ ಇದ್ದವು.

ಫಲಪುಷ್ಪ ಪ್ರದರ್ಶನ ಹಾಗೂ ಗಾಜಿನ ಮನೆಗೆ ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿ ಬುಧವಾರ ಚಾಲನೆ ನೀಡಿದರು.

ಈ ಸಂದರ್ಭದಲ್ಲಿ ಸಚಿವರಾದ ಜಿ.ಟಿ.ದೇವೇಗೌಡ, ಸಾ.ರಾ.ಮಹೇಶ್, ಎನ್.ಮಹೇಶ್, ಶಾಸಕರಾದ ಕೆ.ಮಹದೇವ್, ಅಶ್ವಿನ್ ಕುಮಾರ್, ಶ್ರೀಕಂಠೇಗೌಡ. ಹಾಜರಿದ್ದರು.

ನೂತನವಾಗಿ ನಿರ್ಮಿಸಿರುವ ಗಾಜಿನ ಮನೆಯಲ್ಲಿ ಅರಳಿರುವ ಲೋಟಸ್ ಮಹಲ್ ಈಗ ಎಲ್ಲರ ಆಕರ್ಷಣೆಯ ಕೇಂದ್ರ ಬಿಂದುವಾಗಿದೆ. ಗುಲಾಬಿ ಹಾಗೂ ಇತರ ಹೂ ಬಳಸಿ ಇದನ್ನು ನಿರ್ಮಿಸಲಾಗಿದೆ. 1,200 ಚದರ ಮೀಟರ್ ವಿಸ್ತೀರ್ಣದಲ್ಲಿ ಅಲಂಕಾರ ಮಾಡಲಾಗಿದೆ. ಇದಲ್ಲದೇ, ಹೂಗಳಲ್ಲಿ ರಚಿಸಿರುವ ಅಶೋಕಸ್ತಂಭ, ಅಮರ್ ಜವಾನ್ ಸ್ತಂಭ, ಕಾಫಿ ಮಗ್ ಲೋಟ, ಆನೆಗಾಡಿ, ಡಾಲ್ಫಿನ್ಸ್, ಪೆಂಗ್ವಿನ್ ಕಲಾಕೃತಿ ಜನರ ಕಣ್ಮನ ಸೆಳೆಯುತ್ತಿವೆ. ಹೂವಿನ ಅಲಂಕಾರದಿಂದ ಬಲರಾಮ ದ್ವಾರ, ಗುಲಾಬಿ ಹೂಗಳಿಂದ ಫಿರಂಗಿ ಗಾಡಿ ಸಿದ್ಧಪಡಿಸಲಾಗಿದೆ.





## ಆಹಾರ ಮೇಳ



ಆಹಾರ ಮೇಳವನ್ನು ಆಹಾರ ಮತ್ತು ನಾಗರಿಕ ಸರಾಬರಾಜು ಸಚಿವರಾದ ಜಮೀರ್ ಅಹ್ಮದ್ ಖಾನ್ ದೀಪಾ ಬೆಳಗಿಸುವುದರ ಮೂಲಕ ಉದ್ಘಾಟಿಸುತ್ತಿರುವುದು.

**ರಾಜೇಶ್ವರಿ.**

'ಹಾ ಗೌಜಲಕ್ಕಿ, ಬಾರ್ಬಿ ಕ್ಯೂ ಚಿಕನ್, ಕಾಸ್ತಾವ ಆಯಂಡ್ ಸ್ವೀಟ್ಸ್, ಆಹಾ ನೋಡುತ್ತಿದ್ದರೆ ಬಾಯಿ ಚಪ್ಪರಿಸುತ್ತೆ. ಆದರೆ, ಇದಕ್ಕೂ ಮುನ್ನ ನಾನು ಇದ್ಯಾವುದನ್ನು ತಿಂದಿಲ್ಲ. ಅಯ್ಯೋ ತಿಂದೆ ಇದ್ರೆ ಏನಂತೆ, ಬಾ ಇವತ್ತು ತಿಂದು ನೋಡುವಾ' ಇಂತಹದೊಂದು ಸಂಭಾಷಣೆ ಕೇಳಿ ಬಂದದ್ದು, ದಸರಾ ಆಹಾರ ಮೇಳದಲ್ಲಿ. ಹೌದು! ವಿಶ್ವವಿಖ್ಯಾತ ದಸರಾ ಉತ್ಸವದ ಅಂಗವಾಗಿ ಭಾರತೀಯ ಸ್ಕೌಟ್ಸ್ ಆಂಡ್ ಗೈಡ್ಸ್ ಮೈದಾನ ಮತ್ತು ಲಲಿತ್ ಮಹಲ್ ಪಕ್ಕದ ಮುಡಾ ಮೈದಾನದಲ್ಲಿ ಬುಧವಾರದಿಂದ ಅ.18ರವರೆಗೆ ಏರ್ಪಡಿಸಿರುವ ಆಹಾರ ಮೇಳಕ್ಕೆ ಸಚಿವ ಜಮೀರ್ ಅಹಮದ್ ಚಾಲನೆ ನೀಡಿದರು. ಮೇಳದಲ್ಲಿ ಬುಡಕಟ್ಟು ಸಮುದಾಯಗಳ ಆಹಾರ ಮತ್ತು ವಿದೇಶಿ ಆಹಾರ ಪದಾರ್ಥಗಳು ಕಂಡು ಬಂದವು.

**ಬುಡಕಟ್ಟು ಆಹಾರ ಮಳಿಗೆ:** ಆಹಾರ ಮೇಳದಲ್ಲಿ ಈ ಬಾರಿಯ ಪ್ರಮುಖ ಆಕರ್ಷಕ ತಿನಿಸುಗಳ ಮಳಿಗೆಗಳು ಎಂದರೆ ಕರ್ನಾಟಕ ಬುಡಕಟ್ಟು ಪರಿಷತ್ ಮತ್ತು ಎಚ್.ಡಿ.ಕೋಟೆಯ ಬುಡಕಟ್ಟು ಕೃಷಿ ಸಂಘ ಹಾಕಿರುವ ಮಳಿಗೆಗಳು. ಇಲ್ಲಿ ಕಾಡು ಶುಂಠಿ, ಕಾಡು ಅರಿಶಿಣ, ಕಾಡು ಕೊತ್ತಂಬರಿಯಿಂದ ಮಾಡುವ ತೀತರ್ (ಗೌಜಲಕ್ಕಿ)ಯನ್ನು ಪ್ರದರ್ಶನ ಮತ್ತು ಮಾರಾಟಕ್ಕೆ ಇಟ್ಟಿದ್ದಾರೆ. ಒಂದು ದಿನಕ್ಕೆ 100ರಿಂದ 150 ಪ್ಲೇಟ್ನಷ್ಟು ಮಾತ್ರ ತಯಾರಿಸಲಿದ್ದು, 1 ಪ್ಲೇಟ್ಗೆ 100 ರೂ.ನಿಗದಿಪಡಿಸಲಾಗಿದೆ.

**ಮುದ್ದೆ, ನಳ್ಳಿ ಸಾರು:** ಬುಡಕಟ್ಟು ಸಮುದಾಯದವರು ಹಾಕಿರುವ ಮಳಿಗೆಯಲ್ಲಿ ಗ್ರಾಮೀಣ ಭಾಗದ ಊಟವಾದ ಮುದ್ದೆ ಮತ್ತು ನಳ್ಳಿ ಸಾರು ಊಟ 100ರೂ.ಗೆ ಶುಕ್ರವಾರದಿಂದ ಸಿಗಲಿದೆ. ಇದಲ್ಲದೆ ಮಾಗಳ್ಳಿ ಟೀ, ಒಂದು ಬೌಲ್ ಗೆಣಸಿನ ಜತೆ ಜೇನು ತುಪ್ಪ, ಬಂಬೂ ಬಿರಿಯಾನಿ ಮತ್ತು ಬಿದಿರಕ್ಕಿ ಪಾಯಸ ಸೇರಿದಂತೆ ಹಲವು ಬುಡಕಟ್ಟು ಸಮುದಾಯದ ಆಹಾರ ದೊರೆಯಲಿದೆ.



**ವಿದೇಶಿ ಆಹಾರ:** ಮೈಸೂರು ವಿವಿ ಅಂತಾರಾಷ್ಟ್ರೀಯ ವಿದೇಶಿ ವಿದ್ಯಾರ್ಥಿಗಳ ಒಕ್ಕೂಟ, ಅಂತಾರಾಷ್ಟ್ರೀಯ ಕೇಂದ್ರದಿಂದ ಆಹಾರದ ಮೇಳ ಪ್ರವೇಶದ ದ್ವಾರದ ಎಡ ಭಾಗದಲ್ಲಿ ವಿದೇಶಿ ಆಹಾರ ಮಳಿಗೆ ಹಾಕಲಾಗಿದೆ. ಆಹಾರ ಮೇಳದ 9ದಿನವೂ 12ದೇಶಗಳ ವಿದ್ಯಾರ್ಥಿಗಳ ಒಂದೊಂದು ತಂಡ, ತಮ್ಮ ದೇಶದ ಆಹಾರ ತಯಾರಿಸಿ ಮಾರಾಟ ಮಾಡಲಿದ್ದಾರೆ. ಮೊದಲ ದಿನ ಬುಧವಾರ ಯೆಮನ್ ದೇಶದ ವಿದ್ಯಾರ್ಥಿಗಳು ಮೇಳದಲ್ಲಿ ಮಳಿಗೆ ಹಾಕಿದ್ದರು. ರೈಸ್ ಚಿಕನ್, ಕಾಸ್ತಾವ ಆ?ಯಂಡ್ ಸ್ವೀಟ್ಸ್ , ಬಾರ್ಬಿ ಕ್ಯೂ ಚಿಕನ್ ಮಾರಾಟ ಮಾಡಿದರು.

**98+75 ಮಳಿಗೆಗಳು:** ಸ್ಕೌಟ್ಸ್ ಗೈಡ್ಸ್ ಮೈದಾನದಲ್ಲಿ 98 ಮಳಿಗೆಗಳು ಮತ್ತು ಲಲಿತ್ ಮಹಲ್ ಪಕ್ಕದ ಮೈದಾನದಲ್ಲಿ 75 ಮಳಿಗೆಗಳನ್ನು ಮೊದಲ ದಿನವೇ ತೆರೆಯಲಾಗಿದೆ. ಸಸ್ಯಹಾರಿ ವಿಭಾಗದಲ್ಲಿ ಎಣ್ಣೆ ಗಾಯಿ ರೊಟ್ಟಿ, ಗಿರ್ಮಿಟ್ಟು, ಬಂಗಾರ್ಪೇಟ್ ಚಾಟ್ಸ್, ಹೋಳಿಗೆ ಇದ್ದರೆ. ಅರಬ್ಬಿ ಬಿರಿಯಾನಿ, ದುಬೈ ಸ್ಪಷಲ್ ಬಿರಿಯಾನಿ, ಮಡಕೆ ಬಿರಿಯಾನಿ, ಸಮುದ್ರ ಮೀನಿನ ಫ್ರೈ ಮಾಂಸಹಾರದ ಪ್ರಮುಖ ತಿನಿಸುಗಳಾಗಿವೆ.

## ನಾಡಹಬ್ಬ ದಸರಾದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳ ರಂಗು

**ಕೃಷ್ಣ & ಕಲ್ಪನ.**

ನಾಡಹಬ್ಬ ದಸರಾ ಪ್ರಯುಕ್ತ ಜಗಮೋಹನ ಅರಮನೆಯಲ್ಲಿ ದಿನಾಂಕ 11/10/2018 ರಂದು ಏರ್ಪಡಿಸಲಾಗಿದ್ದ ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ನಾನಾ ಭಾಗಗಳಿಂದ ಅನೇಕ ತಂಡಗಳು ಆಗಮನಿಸಿದವು. ಈ



ಕಾರ್ಯಕ್ರಮಕ್ಕೆ ಸುಧಾಮೂರ್ತಿಯವರು ವಿಶೇಷ ಆಹ್ವಾನಿತರಾಗಿದ್ದರು. ಹಾಗೂ ಯಾವುದೇ ಸ್ಪರ್ಧಿಯೂ ಮೊದಲು ಕಾರ್ಯಕ್ರಮದಲ್ಲಿ ಭಾಗವಹಿಸುವುದು ಬಹಳ ಮುಖ್ಯ ಎಂಬುದಾಗಿ ಕಾರ್ಯಕ್ರಮ ಉದ್ದೇಶಿಸಿ ಮಾತನಾಡಿದರು.ಮೊದಲು ಕಾರ್ಯಕ್ರಮಕ್ಕೆ ಮಹಾರಾಷ್ಟ್ರದ ತಂಡವು ಚಾಲನೆ ನೀಡಿತು. ಈ ತಂಡದ ಕೂಲಿ ನೃತ್ಯವೂ ಬಹಳ ವಿಶೇಷವಾಗಿ ಕೂಡಿದ್ದು ಮಹಾರಾಷ್ಟ್ರದ ಸಂಸ್ಕೃತಿ, ಜಾನಪದ ಶೈಲಿಯನ್ನು ತಿಳಿಸುವಂತೆ ಮಾಡಿತು.ಹಾಗೂ ಅವರ ನೃತ್ಯವೂ ಬಹಳ ಅಚ್ಚುಕಟ್ಟಾಗಿ ಮೂಡಿ ಬಂದಿತು.ಇದಲ್ಲದೇ ರಾಜಸ್ತಾನದಿಂದ ಆಗಮಿಸಿದ್ದ ತಂಡವೂ ಸಹ ಜಾದು ಮಾಡಿತು, ರಾಜಸ್ತಾನದ ಯುವತಿಯೊಬ್ಬಳು ತನ್ನ ಪ್ರತಿಭೆಯನ್ನು ವ್ಯಕ್ತಪಡಿಸುವುದರ ಜೊತೆಗೆ ಸಾಹಸ ಪ್ರದರ್ಶನ ಮಾಡಿದಳು. ಒಂದರ ಮೇಲೆ ಒಂದರಂತೆ ಏಳು ಮಡಿಕೆಗಳನ್ನು ತಲೆಯ ಮೇಲಿರಿಸಿ ಹಾಗೂ ಎರಡು ತಟ್ಟೆಗಳ ಅಂಚಿನಲ್ಲಿ ಕಾಲಿಟ್ಟು ನೃತ್ಯ ಮಾಡಿದಳು. ಇಷ್ಟಲ್ಲದೆ ಗಾಜಿನ ಲೋಟದ ಮೇಲೆಯೂ ಹಾಗೂ ಎರಡು ಕತ್ತಿಯ ಮೇಲೆ ಕಾಲಿಟ್ಟು ತಲೆಯ ಮೇಲಿರುವ ಮಡಿಕೆಗಳು ಕೆಳಗೆ ಬೀಳದಂತೆ ನೃತ್ಯ ಮಾಡಿ ನೆರದ್ದಿದ್ದ ಪ್ರೇಕ್ಷಕರನ್ನು ಬೆರಗಾಗುವಂತೆ ರಾಜಸ್ತಾನದ ಯುವತಿ ಮಾಡಿದಳು.

ಈ ಎರಡು ಕಾರ್ಯಕ್ರಮ ಮುಗಿದ ಮೇಲೆ ಮೈಸೂರಿನವರೆ ಆದ ಸ್ಮಿತಾ ಕಿರಣ್ ಮತ್ತು ತಂಡದವರು ಕೊಳಲು ವಾದನದ ಮೂಲಕ ಜನರನ್ನು ರಂಜಿಸಿದರು ಹಾಗೂ ಕೊಳಲಿನ ವಿವಿಧ ರೀತಿಯ ನಾದ ಶೃತಿಗಳನ್ನು ಹೊಮ್ಮಿಸುವುದರ ಜೊತೆಗೆ ನಾಡಹಬ್ಬದ ಈ ವಿಶೇಷ ಕಾರ್ಯಕ್ರಮಕ್ಕೆ ಮತ್ತಷ್ಟು ಮೆರಗು ತಂದರು ಎಂದು ಹೇಳುಬಹುದಾಗಿದೆ.

ಇವೆಲ್ಲ ಮುಗಿದ ನಂತರ ಬೆಂಗಳೂರಿನಿಂದ ಆಗಮಿಸಿದ್ದ ರಂಜಿತ್ ಸುದರ್ಶನ್ ಮತ್ತು ತಂಡವು ಭರತನಾಟ್ಯದ ಮೂಲಕ ವೇದಿಕೆಗೆ ಪಾದಾರ್ಪಣೆ ಮಾಡುವುದರ ಜೊತೆಗೆ ಸಂಗೀತದ ಲಯ, ತಾಳಕ್ಕೆ, ತಕ್ಕಂತೆ ಭರತನಾಟ್ಯದ ನರ್ತನವು ಹೊರ ಹೊಮ್ಮಿತು.





**ಪತ್ರಿಕಾ ಬಳಗ**

ಪ್ರಧಾನ ಸಂಪಾದಕರು : ಡಾ.ಮಹೇಶ್ ಚಂದ್ರ ಗುರು

ಸಂಪಾದಕರು : ಡಾ.ಸಪ್ನಾ

ವಿದ್ಯಾರ್ಥಿ ಸಂಪಾದಕರು : ಗೌತಮ್, ರಾಗಿ, ಆಶೀಕಾ ಅಪ್ಪಯ್ಯ , ಮನೋಷ್ ಕುಮಾರ್, ಎನ್, ಸುರಭಿ

ಪುಟ ವಿನ್ಯಾಸಕರು : ಥಾಯಿ, ಮನೋಷ್ ಕುಮಾರ್ ಎನ್

ವರದಿಗಾರರು :

ಅಹಲ್ಯಾ, ಅಕ್ಷತಾ, ಅಂಕಿತಾ, ಅನಿಲ್, ಲಕ್ಷ್ಮಿತಾ, ಬೇಬಿ, ಬಿರೇಶ್, ಚಂದನ್, ಎರೈನ್, ರೇಮಿ, ಕಲ್ಪನಾ, ಕಿಶೋರ್, ಕೃಷ್ಣ, ಮಹೇಶ್, ಮಂಜುನಾಥ್, ಮೇಘಾ, ಮೇಘಾ ಎಂ, ಮೆಹ್ನಾ ರಾಮ್, ಮೋಹನ್ ಕುಮಾರ್, ನಾಗಮಲ್ಲೂ, ಥಾಯಿ, ಪ್ರಾರ್ಥನಾ, ರಾಜೇಶ್ವರಿ, ರಮ್ಯಾ, ರಾಣಿ, ಸಾಗರ್, ಶಶಾಂಕ್, ಶ್ರೀಧರ್, ವಾಸುದೇವ್, ಯೆರ್ರೀಸ್ವಾಮಿ,

# ದೀಪಗಳಿಂದ ಕಂಗೊಳಿಸುತ್ತಿರುವ ಸಾಂಸ್ಕೃತಿಕ ನಗರಿ

**ಮಂಜುನಾಥ್ ಮತ್ತು ಮನೋಜ್.**

ಮೈಸೂರು: ವಿಶ್ವವಿಖ್ಯಾತ ಮೈಸೂರು ದಸರಾ(ನಾಡಹಬ್ಬ) ಹಲವು ವೈಭವಗಳಿಗೆ ಸಾಕ್ಷಿಯಾಗಿದೆ. ಆ ಪೈಕಿ ನವರಾತ್ರಿಗಳಲ್ಲಿ ಸಾಂಸ್ಕೃತಿಕ ನಗರಿಯು ಮಧುವಣಗಿತ್ತಿಯಂತೆ ಸಿಂಗಾರಗೊಂಡಂತಿತ್ತು. ಪಾರಂಪರಿಕ ನಗರಿಯ ರಸ್ತೆಗಳು, ವೃತ್ತಗಳು, ಕಟ್ಟಡಗಳು ಬೆಳಕಿನಲ್ಲಿ ಮಿಂದೆದ್ದಿವೆ. ಈಗ ದೀಪಾಲಂಕಾರಗಳಿಂದ ಝಗಮಗಿಸುವ ಮೈಸೂರು ಪ್ರವಾಸಿಗರಿಗೆ ರಸದೌತಣ ಉಣಬಡಿಸಿದೆ.

ಅ–10–ಬುಧವಾರ ಮೈಸೂರಿನ ಸಯ್ಯಾಜಿರಾವ್ ರಸ್ತೆಯಲ್ಲಿ ನಡೆದ ದಸರಾ ದೀಪಾಲಂಕಾರ ಉದ್ಘಾಟನೆಯನ್ನು ಮುಖ್ಯಮಂತ್ರಿ ಹೆಚ್, ಡಿ, ಕುಮಾರಸ್ವಾಮಿಯವರು ರಿಮೋಟ್ ಕೀ ಒತ್ತುವುದರ ಮೂಲಕ "ದಸರಾ ದೀಪಾಲಂಕಾರ–2018"ಕ್ಕೆ ಚಾಲನೆಯನ್ನು ನೀಡಿದರು.

ಆಕರ್ಷಕ ಹಸಿರು ಮಂಟಪ: ಎಲ್ಲರನ್ನು ಆತ್ಮೀಯವಾಗಿ ಸ್ವಾಗತಿಸುವಂತಿದ್ದ ಹಸಿರು ಮಂಟಪವನ್ನು ಎಲ್,ಇ,ಡಿ ಬಲ್ಬ್‌ಗಳಿಂದ ನಿರ್ಮಿಸಿದ್ದು ಈ ಬಾರಿಯ ವಿಶೇಶವಾಗಿತ್ತು. ಚೆಸ್ಕಾಂನ ವ್ಯವಸ್ತಾಪಕ ನಿರ್ದೇಶಕ ಎಚ್,ಎನ್, ಗೋಪಾಲಕೃಷ್ಣ, ತಾಂತ್ರಿಕ ನಿರ್ದೇಶಕ ಎನ್, ನರಸಿಂಹೇಗೌಡ, ಅಧೀಕೃತ ಎಂಜಿನಿಯರ್‌ಗಳಾದ ಕೆ, ಎಂ, ಮುನಿಗೋಪಾಲಸ್ವಾಮಿ, ಎಚ್, ಎಸ್, ಸ್ವಾಮಿ ಇದ್ದರು.

**ದೀಪಾಲಂಕಾರ ವಿಶೇಷ:** ನವರಾತ್ರಿಯ ದಿನಗಳಲ್ಲಿ ಮೈಸೂರು ಬೆಳಕಿನ ಚಿತ್ತಾರದಿಂದ ಕಣ್ಮನ ಸೆಳೆಯುತ್ತದೆ. ದಸರಾ ದೀಪಾಲಂಕಾರ ಉಪಸಮಿತಿಯು 2.98ಕೋಟಿ ವೆಚ್ಚದಲ್ಲಿ ರಸ್ತೆಗಳು, ವೃತ್ತಗಳನ್ನು ಶೃಂಗಾರಮಾಡಿವೆ. ದೀಪಾಲಂಕಾರ ಉಪಸಮಿತಿಯ ನಿರ್ದೇಶನದಲ್ಲಿ ಬೆಂಗಳುರಿನ ಜಯನಗರದ ಮೋಹನ್‌ಕುಮಾರ್ ಸೌಂಡ್ಸ್ ಮತ್ತು ಲೈಟಿಂಗ್ಸ್ ಸಂಸ್ಥೆ ನೋಡುಗರ ಕಣ್ಮನ ತಣಿಸದುವ ಮಹನೀಯರ ಪ್ರತಿಕೃತಿಗಳು ಹಾಗೂ ಪ್ರಸಿದ್ದ ಕಟ್ಟಡಗಳು ಬೆಳಕಿನ ಚಿತ್ತಾರದಲ್ಲಿ ಮುಳುಗಲು ಕಾರಣರಾಗಿದ್ದಾರೆ.

**R.G.B- LED** ಬಳಕೆ: ಬಹು ಬಣ್ಣಗಳನ್ನು ಪ್ರದರ್ಶಿಸುವ ಆರ್,ಜಿ,ಬಿ(ರೆಡ್, ಗ್ರೀನ್, ಬ್ಲೂ) ಎಲ್,ಇ,ಡಿ ಬಲ್ಬ್‌ಗಳನ್ನು ಬಳಸಿ ದೀಪಾಲಂಕಾರ ಮಾಡಲಾಗಿದೆ. ಡಿ, ದೇವರಾಜ ಅರಸು ರಸ್ತೆ, ಹಾಗೂ







ಮಾನಸಗಂಗೋತ್ರಿಯ ಬಯಲು ರಂಗಮಂದಿರ ರಸ್ತೆಗಳಲ್ಲಿ ಇವನ್ನು ಅಳವಡಿಸಲಾಗಿದೆ. ಬುಲೆವಾರ್ಡ್, ಚಾಮುಂಡಿ ಬೆಟ್ಟದ ರಸ್ತೆಗಳಲ್ಲಿ ವಿಶೇಷವಾಗಿ ದೀಪಾಲಂಕಾರಗಳಿವೆ.

ರಾಜ್ಯದಲ್ಲಿ ಮೊದಲ ಬಾರಿಗೆ ಲ್ಯಾಂಟರ್ನ್ ಉತ್ಸವ, ಬಣ್ಣದ

| |
|---|
| **ರಸ್ತೆಗಳು–26** |
| **ವೃತ್ತಗಳು–51** |
| **ವೆಚ್ಚ–2.98 ಕೋಟಿ ರೂ** |
| **ಪ್ರಾಯೋಜಕತ್ವ–49ಲಕ್ಷ ರೂ** |
| **ವಿದ್ಯುತ್ ಯೂನಿಟ್–1500 ಕಿ,ವ್ಯಾ** |
| **ಕಳೆದ ಬಾರಿಯ ವೆಚ್ಚ– 2 ಕೋಟಿ** |

ರಂಗೇರಿದ ಲ್ಯಾಂಟನ್ ಪಾರ್ಕ್ ಈ ಬಾರಿಯ ದಸರಾದಲ್ಲಿ ಲ್ಯಾಂಡರ್ನ್ ಉತ್ಸವ ವಿಶೇಷವಾಗಿ ಎಲ್ಲರ ಆಕರ್ಷಣೀಯ ಕೇದ್ರವಾಗುತ್ತಿದೆ. ದಸರಾ ವಸ್ತುಪ್ರದರ್ಶನ ಆವರಣದಲ್ಲಿ 15ಸಾವಿರ ಚದರ ಅಡಿ ಪ್ರದೇಶದಲ್ಲಿ ನಿರ್ಮಾಣವಾಗಿರುವ ಲ್ಯಾಂಟನ್ ಪಾರ್ಕ್ ಅಲ್ಲಿ ಚೀನಾದ ಓಷಿಯನ್ ಆರ್ಟ್ ಕಂಪನಿಯ 19 ಪರಿಣತರಿಂದ ಬಣ್ಣ ಹಾಗೂ ಸಾಂಸ್ಕೃತಿಕ ಲೋಕ ಅನಾವರಣಗೊಂಡಿದೆ.

**ಚೀನಾದ ಮೂಲ:** ಲ್ಯಾಂಟರ್ನ್ ಉತ್ಸವ ಆಯೋಜನೆ ಮೂಲಕ ಚೀನಾವು ಹೊಸವರ್ಷ ಆಚರಣೆ ಅಲ್ಲಿಯ ವಾಡಿಕೆ. ಡ್ರೀಮ್‌ಪೆಟಲ್ಸ್ ಸಂಸ್ಥೆಯು ಲ್ಯಾಟಿನ್‌ಪಾರ್ಕ್ ನಿರ್ಮಿಸಿದೆ. 5 ಸಾವಿರ ಎಲ್,ಇ,ಡಿ ಬಲ್ಬ್ ಬಳಸಿ ಗುಲಾಬಿ ಉದ್ಯಾನ ನಿರ್ಮಿಸಲಾಗಿದೆ. ಇದು ಎಲ್ಲರ ಚಿತ್ತವನ್ನು ತನ್ನತ್ತ ಅರಿಯುವಂತೆ ಮಾಡಿಕೊಂಡಿದೆ. 90 ದಿನಗಳು ನಡೆಯಲಿರುವ ಈ ಉತ್ಸವಕ್ಕೆ ಜನರಿಂದ ಈಗಾಗಲೇ ಅತ್ಯುತ್ತಮ ಪ್ರತಿಕ್ರಿಯೆ ಹೊರಹೊಮ್ಮಿದೆ.

ಪರಿಸರ ಸಂರಕ್ಷಣೆಗೆ ಆದ್ಯತೆ: ಪ್ರಸಕ್ತ ದಸರೆಯಲ್ಲಿ ದೀಪಾಲಂಕಾರ ವ್ಯವಸ್ತೆ ಮಾಡುವಾಗಲೇ ಅನೇಕ ಮುಂಜಾಗ್ರತ ಕ್ರಮಗಳನ್ನು ಕೈಗೊಳ್ಳಲಾಗಿದೆ. ಮರದ ಮೇಲೆ ವಾಸಿಸುವ ಪ್ರಾಣಿ, ಪಕ್ಷಿಗಳಿಗೆ, ರಾತ್ರಿ ವೇಳೆ ತೊಂದರೆಯಾಗದಂತೆ ಮುನ್ನೇರಿಚ್ಚರಿಕೆಯನ್ನು ವಹಿಸಲಾಗಿತ್ತು.

# ಹಾಡು, ನೃತ್ಯ ಮನರಂಜನೆಯ ಮಹಾಪೂರ ಯುವ ದಸರಾ

**ರಮ್ಯ & ಪ್ರಾರ್ಥನ**

ಮೈಸೂರು : ಸಾಂಸ್ಕೃತಿಕ ನಗರಿ ಮೈಸೂರಿನ ದಸರಾ ಸಂಭ್ರಮವು ತುಂಬಾ ಯಶಸ್ವಿಯಾಗಿ ಸಾಗುತ್ತಿದ್ದು, ಸಾಂಸ್ಕೃತಿಕ ಕಾರ್ಯಕ್ರಮಗಳು ದಸರಾದ ಮೆರಗನ್ನು ಮತ್ತಷ್ಟು ಹೆಚ್ಚಿಸಿದ್ದು,

10–10–2018ರ ಶುಕ್ರವಾರದಂದು ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಅದ್ಧೂರಿ ಚಾಲನೆಯನ್ನು ನೀಡಲಾಯಿತು. ಮೈಸೂರಿನ ಅರಮನೆಯ ಸಾಂಸ್ಕೃತಿಕ ವೇದಿಕೆಯಲ್ಲಿ ಡಾ.ವೀಣಾಮೂರ್ತಿ ,ವಿಜಯ್ ಮತ್ತು ತಂಡದವರಿಂದ ನೃತ್ಯರೂಪಕ ನಡೆಯಿತು. ಜಾನಪದ ನೃತ್ಯವು ಇಂದಿನ ಆಕರ್ಷಣೆಯ ಕೇಂದ್ರವಗಿತ್ತು. ಕಾರ್ಯಕ್ರಮಕ್ಕೆ ಹೆಚ್ಚಿನ ವಿದೇಶಿಗರು ಆಗಮಿಸಿದ್ದು ಜಾನಪದ ನೃತ್ಯಗಾರರ ವೇಷಭೂಷಣಕ್ಕೆ ಬೆರಗಾಗಿ ಅವರೊಂದಿಗೆ "ಸೆಲ್ಫೀ"ಯಲ್ಲಿ ಮಗ್ನರಾದರು. ದಸರಾ ಹಬ್ಬದ ಎರಡನೇ ದಿನವಾದ ಗುರುವಾರದಂದು ಜಗನ್ಮೋಹನ ಅರಮನೆಯಲ್ಲಿ ಶಾಸ್ತ್ರೀಯ ಸಂಗೀತ, ಜಾನಪದ ಗಾಯನ, ಕೊಳಲು ವಾದನ ಹಾಗು ವಿವಿಧ ವಾದ್ಯಗಳ ಜುಗಲ್ ಬಂದಿ ಕಾರ್ಯಕ್ರಮ ನೆರವೇರಿತು.

12–10–2018ರ ಶುಕ್ರವಾರದಂದು ಸಂಜೆ 5–30ರಲ್ಲಿ ಜಗನ್ಮೋಹನ ಅರಮನೆಯಲ್ಲಿ ಪ್ರಾರಂಭವಾದ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಹೇಮಾವತಿ (ಬಳ್ಳಾರಿ)ಯವರ ಮಾರ್ಗದರ್ಶನದಲ್ಲಿ ಭರತನಾಟ್ಯ ನೃತ್ಯ ನೆರವೇರಿತು. ವಿಘ್ನವಿನಾಶಕನನ್ನು ಕುರಿತಂತೆ "ಶರಣು ಸಿದ್ದಿವಿನಾಯಕ" ಎನ್ನುತ ಹೆಜ್ಜೆಯನ್ನಿಟ್ಟ ನಾರಿಯರ ಉಡುಗೆ– ತೊಡುಗೆ ಆ ಗೆಜ್ಜೆಗಳ ನಾದ ನೆರೆದಿದ್ದ ಜನರ ಮನ ಸೂರೆಗೋಳಿಸಿತು.ವಿವಿಧ ಭಂಗಿಗಳಲ್ಲಿ ಗಣಪನ ರೋಪ ತೋರುತ್ತ ನೃತ್ಯ ಮಾಡಿದ ಯುವತಿಯರು ಭರತನಾಟ್ಯದ ಔತನವನ್ನಿಟ್ಟರು.

ಪುರಂದರದಾಸರ ಕಿರ್ತನೆಯಾದ ಕೃಷ್ಣನ ಗೀತೆಯೊಂದಕ್ಕೆ ಮಾಲಕಂಸ ರಾಗಕ್ಕೆ ಕುಣಿದ ನಾರಿಯರು ತಮ್ಮ ಸುಂದರ ಭಾವ ಲಕ್ಷಣಗಳ ನಟನೆಯಲ್ಲಿಯೇ ಶ್ರೀ ಕೃಷ್ಣನ ತುಂಟತನ ಹಾಗು ಆತನ ವಿಶ್ವರೂಪದ ದರ್ಶನದ ಚಿತ್ರಣಗಳನ್ನು ಮೂಡಿಸಿದರು. ಅತಿ ಹೆಚ್ಚಿನ ಸಂಖ್ಯೆಯ ವಯೋವೃದ್ಧರು ಉತ್ಸುಕತೆಯಿಂದ ಕಾರ್ಯಕ್ರಮ ವಿಕ್ಷಿಸುತ್ತಿದ್ದದು ಇಲ್ಲಿನ ಮತ್ತೋಂದು ವಿಶೇಷವಾಗಿದೆ.



ಯುವ ದಸರಾದಲ್ಲಿ ಖ್ಯಾತ ಗಾಯಕ ವಿಜಯ್ ಪ್ರಕಾಶ್



ಯುವ ದಸರಾದ ಸ್ಯಾಂಡಲ್ ವುಡ್ ನೈಟ್‌ನ ಕಾರ್ಯಕ್ರಮ

# ಮಹಿಳಾ ದಸರಾದಲ್ಲಿ ಕರಕುಶಲ ವಸ್ತುಗಳ ದರ್ಬಾರ್



ಕರಕುಶಲ ವಸ್ತುಗಳನ್ನು ವೀಕ್ಷಿಸುತ್ತಿರುವ

**ರಾಜೇಶ್ವರಿ ಲಕ್ಕಣ್ಣವರ ಹಾಗೂ ರಾಣಿ. ಕೆ.ಎನ್,**

ಮೈಸೂರು : ಜೆ.ಕೆ.ಮೈದಾನದಲ್ಲಿ ಗುರುವಾರ ನಡೆದ ಮಹಿಳಾ ದಸರಾದ ತುಂಬ ಎಲ್ಲ ಕರಕುಶಲ ವಸ್ತುಗಳೇ ರಾರಾಜಿಸುತ್ತಿದ್ದವು. ಅದು ಮಹಿಳೆಯರೇ ಎಲ್ಲವನ್ನೂ ತಯಾರಿಸಿದ್ದು ವಿಶೇಷವಾಗಿತ್ತು.

"ಮಹಿಳೆಯರಿಂದ ಮಹಿಳೆಯರಿಗಾಗಿ ಮಹಿಳೆಗೋಸ್ಕರ" ಎಂದು ಹೇಳುವಷ್ಟರ ಮಟ್ಟಿಗೆ ಅಲ್ಲಿನ ಮಳಿಗೆಗಳು ಮಹಿಳೆಯರನ್ನು ಕೈ ಬೀಸಿ ಕರಿತಾ ಇದ್ದವು. ಸ್ತ್ರೀ ಶಕ್ತಿ ಸಂಘಗಳು ತಯಾರಿಸಿದ ಬಗೆ ಬಗೆಯ ವಸ್ತುಗಳು ಇದ್ದವು. ಮಂಡ್ಯದಿಂದ ಬಂದಿದ್ದ ಲಕ್ಷೀದೇವಿ ಸ್ತ್ರೀ ಶಕ್ತಿ ಮಹಿಳಾ ಗುಂಪಿನ ಸದಸ್ಯರು ಜೇಡಿ ಮಣ್ಣಿನಿಂದ ಮಾಡಿದ ಆನೆ, ಗಣಪತಿ ಹಲವು ಬಗೆಯ ಲ್ಯಾಂಪ್ ಗಳನ್ನು ಮಾರಾಟಕ್ಕೆ ತಂದಿರಿಸಿದ್ದರು. ಇವೆಲ್ಲವನ್ನು ಮಹಿಳೆಯರೇ ಮಾಡಿದ್ದು ವಿಶೇಷ.

ಪೂ ಜೈನ್ ಫ್ಯಾಷನ್ ಕ್ರಿಯೇಷನ್ ವತಿಯಿಂದ ತಾಯಿ ಸರಸ್ವತಿ ಮತ್ತು ಮಗಳು ಪೂಜಾ ಇಬ್ಬರು ಜತೆಗೂಡಿ ತಮ್ಮ ಬಿಡುವಿನ ಸಮಯದಲ್ಲಿ ಮಾಡಿದ ಫ್ಯಾಷನ್ ವಸ್ತುಗಳು ತರುಣಿಯರ ಕಣ್ಮನ ಸೆಳೆದವು.

ಹಾಸನ ಜಿಲ್ಲೆಯ ಬೇಲೂರಿನ ಸೌಮ್ಯ ನಾಯಕಿ ಮತ್ತು ರಂಗನಾಯಕಿ ಎಂಬ ಮಹಿಳಾ ಶಿಲ್ಪಿಗಳು ತಯಾರಿಸಿದ ಕೆತ್ತನೆಯ ಕುಸುರಿ ಸಾಮಾನುಗಳು ಆಕರ್ಷಕವಾಗಿದ್ದವಹ.

ಪ್ರಕೃತಿ ಎಂಟರ್ಪ್ರೈಸ್ ನ ಅಲಂಕಾರಿಕ ದೀಪಗಳು , ಹತ್ತಿಯ ಬ್ಯಾಗಗಳು, ಗಾರ್ಮೆಂಟ್ಸ್ ಉತ್ಪನ್ನಗಳು ನೋಡುಗರ ಕಣ್ಮನ ಸೆಳೆದವು. ಮೈಸೂರಿನ ಅಂಜಲಿ ಅವರು ಟೆರಾಕೋಟ್, ಸಿಲ್ಕ್ ಥ್ರೆಡ್ ಆಭರಣ, ಆಯಂಟಿಕ್ ಜ್ಯೂವೆಲರಿಗಳನ್ನು ಪ್ರದರ್ಶನಕ್ಕೆ ಇಟ್ಟಿದ್ದರು.

ಇವುಗಳ ಜೊತೆಗೆ ಸಾವಯವ ಆಹಾರ ಧಾನ್ಯಗಳು, ಔಷಧೀಯ ವಸ್ತುಗಳ, ಬಗೆ ಬಗೆಯ ಉಡುಪುಗಳು, ಕೈಚೀಲಗಳು ಸೇರಿದಂತೆ ಮಹಿಳಾ ಪ್ರಪಂಚದ ಎಲ್ಲ ವಸ್ತುಗಳು ಇಲ್ಲಿ ತುಂಬಿದ್ದವು.

ಈ ವರ್ಷದಿಂದಲೇ ರಾಜ್ಯದ ಎಲ್ಲ ಸ್ತ್ರೀ ಶಕ್ತಿ ಸಂಘಗಳ ಜತೆ ಸಭೆ ನಡೆಸಿ ಮಹಿಳೆಯರ ಆಹಾರ ಮೇಳ ಮಾಡಲು ಸಮಾಲೋಚಿಸಿದ್ದೆ. ಈ ಬಾರಿಯ ಸಮಯದ ಅಭಾವದಿಂದ ಆಗದೆ ಇರುವುದರಿಂದ ಮುಂದಿನ ಬಾರಿ ಅದನ್ನು ಏರ್ಪಡಿಸಲಾಗುವುದು ಎಂದರು.

ಮಹಿಳಾ ಉದ್ಯಮಿಗಳು , ಸ್ವಸಹಾಯ ಗುಂಪಿನವರು ಸರ್ಕಾರದ ಯೋಜನೆಗಳನ್ನು ಸದುಪಯೋಗ ಪಡಿಸಿಕೊಳ್ಳಬೇಕು ಹಾಗೇ ಕೌಶಲ್ಯ ತರಬೇತಿ ಪಡೆದು ಮಾರುಕಟ್ಟೆಯಲ್ಲಿ ಉತ್ತಮ ಸ್ಥಾನ ಗಳಿಸಬೇಕು ಎಂದು ತಿಳಿಸಿದರು.

> ಮಹಿಳಾ ದಸರಾ ಉದ್ಘಾಟಿಸಿ ಮಾತನಾಡಿದ ಸಚಿವೆ ಜಯಮಾಲಾ ಮಹಿಳಾ ದಸರಾಕ್ಕೆ ಸ್ತ್ರೀ ಶಕ್ತಿ ಸಂಘಗಳ ಸದಸ್ಯರಿಂ ಆಹಾರ ಮೇಳ ನಡೆಸಲು ತೀರ್ಮಾನಿಸಲಾಗಿದೆ ಎಂದು ತಿಳಿಸಿದರು. ಅಂಗನವಾಡಿ ಕಾರ್ಯಕರ್ತೆಯರು ಇಂದಿನ ಸಮಾಜದ ನಿಜವಾದ ಸೇವಕಿಯರಾಗಿದ್ದಾರೆ.
> – ಜಯಮಾಲಾ (ಮಕ್ಕಳ ಮತ್ತು ಮಹಿಳಾ ಸಚಿವೆ)

# ಗ್ರಾಮೀಣ ಸೊಬಗು ಸಾರಿದ ರೈತ ದಸರಾ

**ಅನಿಲ್ ಕುಮಾರ್.**

ಮೈಸೂರು : ಪ್ರತಿದಿನವೂ ಹೊಲಗದ್ದೆ ದನ–ಕರುಗಳು ಮನೆ– ಮಠ ಎಂಬ ಈ ಜಂಜಾಟ ಇವುಗಳಲ್ಲೇ ಜೀವನ ಕಳೆಯುತ್ತಿದ್ದ ರೈತರಿಗೆ ನಾಡಹಬ್ಬ ದಸರಾ ಎಂದರೆ ಮೊಗದಲ್ಲೊಂದಷ್ಟು ಮಂದಹಾಸದ ನಗೆ ಬೀರುತ್ತದೆ, ಏಕೆಂದರೆ ತಮ್ಮ ಮನರಂಜನೆಗೂ ಹಾಗೂ ಕಲೆ ಸಾಮರ್ಥ್ಯ ಮತ್ತು ವಿವಿಧ ಪ್ರತಿಭೆಗಳ ಅನಾವರಣಕ್ಕೆ ಪ್ರತ್ಯೇಕ ವೇದಿಕೆ ಸಿಗುವುದೆಂಬ ಸಂತಸಕ್ಕೆ ದಿ:12–10–2018 ರಂದು ನಡೆದ ರೈತ ದಸರಾ ಸಾಕ್ಷಿಯಾಗಿತ್ತು.

ಪ್ರತಿದಿನವೂ ವಾಹನಗಳ ಶಬ್ಧಗಳು, ಅಪಾರ ಜನಸಖ್ಯೆಯಿಂದ ತುಂಬಿ ತುಳುಕುತ್ತಿದ್ದ ರಾಜಬೀದಿ ಕೆಲಕಾಲ ಸ್ಥಬ್ಧವಾಗಿತ್ತು. ತಳಿರು ತೋರಣ ಹೂವುಗಳಿಂದ ಸಿಂಗರಿಸಿದ ಎತ್ತಿನಗಾಡಿಯಲ್ಲಿ ಕೂತು ಸಾಗುತ್ತಿದ್ದ ರೈತರಿಗೆ ಮೈಸೂರು ಭವ್ಯ ಸ್ವಾಗತ ಕೋರುವಂತಿತ್ತು. ಗ್ರಾಮೀಣ ಸೊಗಡನ್ನು ಸಾರುವ ಕಲಾ ತಂಡಗಳಾದ ವೀರಗಾಸೆ, ಡೊಳ್ಳು ಕುಣಿತ, ಕೋಲಾಟ, ಕಂಸಾಳೆ, ಗಾರುಡಿ ಗೊಂಬೆ, ಪಾಳೇಗಾರರ ಆಟ, ಹುಲಿವೇಷದ ಕುಣಿತ, ಇದರ ಜೊತೆಗೆ ಮಹಿಳೆಯರ ಕುಂಭಮೇಳವು ಸಾಂಪ್ರದಾಯಿಕವಾಗಿ ನಮ್ಮ ಅನ್ನದಾತರಿಗೆ ಸ್ವಾಗತ ಕೋರುವುದರ ಜೊತೆಗೆ ಮನರಂಜನೆಯನ್ನು ನೀಡಿದವು. ವಿಶೇಷತೆಯೆಂದರೆ ಮೈಸೂರಿನ ಜೆ,ಕೆ ಮೈದಾನದಲ್ಲಿ ಆಯೋಜಿಸಲಾಗಿದ್ದ ರೈತ ವಸ್ತು ಪ್ರದರ್ಶನವು ಗಮನ ಸೆಳೆಯಿತು. ವಿಶೇಷ ಆವಿಷ್ಕಾರಗಳು, ವಿವಿಧವಾದ ಕೃಷಿಯಲ್ಲಿ ಉತ್ತಮ ಇಳುವರಿ ಪಡೆಯಬಹುದಾದ ತಳಿಗಳು ಕಾಣ ಸಿಗುತ್ತಿದ್ದವು. ವೈಜ್ಞಾನಿಕ ಬೇಸಾಯದ ಮಾಹಿತಿ ಪಡೆದು ಉತ್ತಮ ಫಸಲು ಬೆಳೆಯಬೇಕೆಂಬ ಮಹದಾಸೆಯನ್ನೊತ್ತು ಬಂದವರೇ ಅಧಿಕವಾಗಿದ್ದರು. ಇದಕ್ಕೆ ಪ್ರತಿಯಾಗಿ ಕೃಷಿ ವಸ್ತು ಪ್ರದರ್ಶನವು ಆಯೋಜಿಸಲಾಗಿದ್ದ ನಾನಾ ತಳಿ ಬೆಳೆಯುವ ಮಾಹಿತಿ, ಇಸ್ರೇಲ್ ಮಾದರಿಯ ಕೃಷಿ, ವಿದೇಶಿ ತರಕಾರಿ ಬೆಳೆಯುವುದು, ಶೂನ್ಯ ಬಂಡವಾಳದ ಅರಿವನ್ನು ಕೂಡ ಪಡೆದುಕೊಂಡರು. ಇದಲ್ಲದೆ ಪಶು ಸಂಗೋಪನೆ, ನಾಟಿಕೋಳಿ, ದೇಸಿಹಸು, ಟಗರು ಮತ್ತು ಮೇಕೆ ಪ್ರದರ್ಶನಗಳೊಂದಿಗೆ, ಕೃಷಿ ಯಂತ್ರೋಪಕರಣಗಳ ಭರಪೂರ ಮಾಹಿತಿಗಳನ್ನು ಪಡೆದುಕೊಂಡರು.



ರೈತ ದಸರಾದ ಮೆರವಣಿಗೆಯಲ್ಲಿ ಪಾಲ್ಗೊಂಡ ಉನ್ನತ ಶಿಕ್ಷಣ ಸಚಿವ ಜಿ.ಟಿ ದೇವೆಗೌಡ ಎತ್ತಿನ ಗಾಡಿ ಮೂಲಕ ಜೆ.ಕೆ ಮೈದಾನಕ್ಕೆ ಆಗಮಿಸಿದರು

ಇಷ್ಟಕ್ಕೆ ಸೀಮಿತವಾಗದೇ ಅನ್ನದಾತರನ್ನು ಮನರಂಜಿಸಲು ವಿವಿಧ ಕ್ರೀಡೆಗಳನ್ನು ಆಯೋಜಿಸಲಾಗಿತ್ತು. ಮತ್ತು ರೈತರ ಪ್ರತಿಭೆಯನ್ನು ಹೊರತರಲು ಅವಕಾಶ ಮಾಡಿಕೊಡಲಾಗಿತ್ತು. ರೈತರ ದಿನ ನಿತ್ಯದ ಕೆಲಸಗಳನ್ನೇ ಕ್ರೀಡೆಗಳನ್ನಾಗಿ ಆಯೋಜಿಸಿದ್ದದ್ದು ವಿಶೇಷವೆನಿಸಿತು. ನಿಧಾನಗತಿಯ ಸೈಕಲ್ ರೇಸ್, ಗೊಬ್ಬರ ಮೂಟೆ ಹೊತ್ತು ಓಡುವುದು, ಮತ್ತು ಗೋಣಿ ಚೀಲದೊಳಗೆ ನಿಂತು ಕುಪ್ಪಳಿಸುವ ಸ್ಪರ್ಧೆ ಇದರೊಂದಿಗೆ ಮಹಿಳೆಯರಿಗೆ, ಕಪ್ಪೆ ಜಿಗಿತ, ಲೆಮನ್ ಅಂಡ್ ಸ್ಪೂನ್ ಹಾಗೂ ಬಿಂದಿಗೆ ಹೊತ್ತು ಓಡುವ ಸ್ಪರ್ಧೆಗಳಿದ್ದವು. ಇದಕ್ಕೆ ಪ್ರೋತ್ಸಾಹದಾಯಕವಾಗಿ ಪ್ರಥಮ, ದ್ವಿತೀಯ, ತೃತೀಯ ಬಹುಮಾನಗಳನ್ನು ನೀಡಿದರು. ರೈತ ದಸರದ ಪ್ರಮುಖ ಭಾಗವಾದ ಹಾಲು ಕರೆಯುವ ಸ್ಪರ್ಧೆಯು ಆಕರ್ಷಣೆಯಾಗಿತ್ತು. ಇಲ್ಲಿ ಅತ್ಯಧಿಕ ಹಾಲು ಕರೆಯುವ ಸ್ಪರ್ಧೆಯಾಗಿದ್ದು ರಾಜ್ಯದ ನಾನಾ ಕಡೆಗಳಿಂದ ತಮ್ಮ ಹಸುಗಳೊಡನೆ ಸ್ಪರ್ಧಿಗಳು ಆಗಮಿಸಿದ್ದರು, ಮತ್ತು ಈ ಸ್ಪರ್ಧೆಯು ಗೋಪಾಲಕರಿಗೆ ಸ್ಪೂರ್ತಿದಾಯಕವಾಗಿತ್ತು. ಇದರ ಜೊತೆಗೆ ಅತಿ ಹೆಚ್ಚು ಹಾಲು ಕರೆಯುವ ಸ್ಪರ್ಧಿಗಳಿಗೆ ಪ್ರೋತ್ಸಾಹದಾಯಕವಾಗಿ ಬಹುಮಾನ ನೀಡುವುದರ ಮೂಲಕ ಪಶುಸಂಗೋಪನೆಯ ಕಡೆ ರೈತರಲ್ಲಿ ಹೆಚ್ಚು ಒಲವು ಮೂಡಿಸಿದರು. ಒಟ್ಟಾರೆಯಾಗಿ ಅನ್ನದಾತರಿಗೆ ಗೌರವ ನೀಡುವ ಒಂದು ಕಾರ್ಯಕ್ರಮಕ್ಕೆ ರೈತದಸರಾ ಪ್ರತ್ಯಕ್ಷ ಸಾಕ್ಷಿಯಾಗಿತ್ತು.



ನಗರದಲ್ಲಿ ಶುಕ್ರವಾರ ನಡೆದ ರೈತರ ದಸರಾ ಮೆರವಣಿಗೆಯಲ್ಲಿ ಬನ್ನೂರು ಕುರಿಗಳು ಸಾಗಿದವು



ರೈತ ದಸರಾದ ಮೆರವಣಿಗೆಯಲ್ಲಿ ಪಾಲ್ಗೋಂಡು ಎತ್ತಿನ ಗಾಡಿ ಮೂಲಕ ಜೆ.ಕೆ ಮೈದಾನಕ್ಕೆ ಆಗಮಿಸಿದ ರೈತರು.

# ಮತ್ಸ್ಯಲೋಕವೇ ಸರಿ !



ಮೈಸೂರಿನ ಜೆ.ಕೆ.ಮೈದಾನದಲ್ಲಿ ಶುಕ್ರವಾರ ಆರಂಭವಾದ ಮತ್ಸ್ಯಮೇಳದಲ್ಲಿ ಆಕರ್ಷಣೆಯ ಕೇಂದ್ರ ಬಿಂದುವಾಗಿರುವ ಸುರಂಗ ಅಕ್ವೇರಿಯಂ (ಟನಲ್ ಅಕ್ವೇರಿಯಂ)

**ಬೇಬಿ.**

ಮತ್ಸ್ಯಮೇಳ ಎಂದರೆ ಅದು ಒಂದು ಮತ್ಸ್ಯಲೋಕವೇ ಆಗಿರುತ್ತದೆ. ಮೈಸೂರು ದಸರಾ ಪ್ರಯುಕ್ತ ಜೆ,ಕೆ ಮೈದಾನದಲ್ಲಿ ಏರ್ಪಡಿಸಿದ್ದ ಮತ್ಸ್ಯಮೇಳವು ಜನತೆಯ ಆಕರ್ಷಣೆಯ ಪ್ರಮುಕ ಭಾಗವಾಗಿತ್ತು.

ಮೈಸೂರು ದಸರಾ ಅಂಗವಾಗಿ ಹಮ್ಮಿಕೊಂಡಿದ್ದ ಮತ್ಸ್ಯಮೇಳವು 12–10–2018 ರಂದು ಜಿ,ಟಿ ದೇವೆಗೌಡ, ಸಾ,ರಾ ಮಹೇಶ್‌ರಿಂದ ಉದ್ಘಾಟಿಸಲ್ಪಟ್ಟಿತ್ತು. ನಂತರ ಜಿ,ಟಿಡಿ ರವರು ವಿವಿಧ ಬಗೆಯ ಮೀನುಗಳನ್ನು ನೋಡಿ ಅಚ್ಚರಿಗೊಂಡರು. ಈ ಮತ್ಸ್ಯಮೇಳವು ಮೈಸೂರಿನ ಜನತೆಗೆ ಬಹಳ ವಿಭಿನ್ನವಾದದ್ದು, ಏಕೆಂದರೆ ಈ ವರೆಗೂ ನೋಡಿರದ ಎಷ್ಟೋ ಬಗೆಯ ಮೀನುಗಳನ್ನು ಪ್ರದರ್ಶಿಸಲಾಯಿತು. ಹಾಗೂ ಮತ್ಸ್ಯಮೇಳವು ವಿಭಿನ್ನ ಪ್ರಯತ್ನದೊಂದಿಗೆ ಜರುಗಿತು. ಮೈಸೂರಿನ ಜನತೆಯು ಮಕ್ಕಳೊಡನೆ ಸೇರಿ ತಾವು ಮಕ್ಕಳಾಗಿ ಮೀನುಗಳನ್ನು ನೋಡಿ ಸಂತಸಪಟ್ಟರು.

ಪ್ರಾರಂಭದಲ್ಲಿ ಕಮಾನಿನಾಕಾರದ ಅಕ್ವೇರಿಯಂ ಜನಾಕರ್ಷಣೆಯ ಮುಖ್ಯ ಭಾಗವಾಗಿತ್ತು. ಇಲ್ಲಿ ಒಳ ಪ್ರವೇಶಿಸಿದ ಮತ್ಸ್ಯಪ್ರೇಮಿಗಳಿಗೆ ಸಮುದ್ರದೊಳಗೆ ವಿಹರಿಸಿದಂತಹ ಅನುಭವ ಉಂಟಾಯಿತು. ಇದು ಪ್ರಮುಖ ಸೆಲ್ಫಿ ಸ್ಪಾಟ್ ಆಗಿತ್ತು. ನೆರೆದಿದ್ದ ಜನರೆಲ್ಲರು ಈ ಅಕ್ವೇರಿಯಂ ಬಳಿ ನಿಂತು ಸೆಲ್ಫಿ ಕ್ಲಿಕ್ಕಿಸಿಕೊಳ್ಳುತ್ತಿದ್ದರು. ಬೃಹದಾಕಾರದ ಮೀನುಗಳನ್ನು ಸಹ ಹೊಂದಿತ್ತು.

ಜೊತೆಗೆ ಈ ಮತ್ಸ್ಯಮೇಳದಲ್ಲಿ ಕೇವಲ ಅಲಂಕಾರಿಕ ಮೀನುಗಳಿರದೆ ರೈತರಿಗೆ ಸಂಬಂಧಿಸಿದ ಉಪಯುಕ್ತ ಮಾಹಿತಿಯನ್ನು ಮೀನುಗಾರಿಕೆ ಇಲಾಖೆಯಿಂದ ಒಳನಾಡು ಮೀನು ಕೃಷಿ ಎಂಬ ಅಭಿಯಾನದಿ ನೀಡಲಾಯಿತು. ಮೀನು ಕೃಷಿ, ಕೊಳ ನಿರ್ಮಾಣಕ್ಕೆ ಸೂಕ್ತ ಸ್ಥಳದ ಆಯ್ಕೆ, ಬೇಕಾಗಿರುವ ಮಣ್ಣಿನ ಗುಣ ಧರ್ಮಗಳು. ಕೊಳದ ತಯಾರಿ, ನೀರಿನ ಗುಣಧರ್ಮಗಳ ಕಾಪಾಡುವಿಕೆ. ಮೀನು ಮರಿಗಳ ಬಿತ್ತನೆ ಇನ್ನಿತರ ವೈಜ್ಞಾನಿಕ ಮಾಹಿತಿಯನ್ನು ನೀಡಲಾಯಿತು. ಜೊತೆಗೆ ಮೀನು ಕೃಷಿಗೆ ಆಸಕ್ತಿ ತೋರಿದ ರೈತರಿಗೆ ಸರ್ಕಾರದಿಂದ ಸಿಗುವ ಸವಲತ್ತುಗಳ ಬಗ್ಗೆ ಮಾಹಿತಿ ನೀಡಲಾಯಿತು. ಸಾಮಾನ್ಯವಾಗಿ ಕೃಷಿಗೆ ಬಳಸುವ ಮೀನುಗಳಾದ ಕಾಟ್ಲಾ, ರೋಹು, ಮೃಗಾಲ್, ಸಾಮಾನ್ಯಗೆಂಡೆ, ಬೆಳ್ಳಿಗೆಂಡೆ, ಹುಲ್ಲುಗೆಂಡೆಗಳಂತಹ ಮೀನುಗಳ ಬಗ್ಗೆ ತಿಳಿಸಲಾಯಿತು. ಮತ್ತು ಸಾಕಣೆಗೆ ಅವಶ್ಯಕವಿರುವ ಮೀನು ಮರಿಗಳ ಪ್ರದರ್ಶನವನ್ನು ಏರ್ಪಡಿಸಲಾಯಿತು. ಇವುಗಳ ಜೊತೆಗೆ ಮೀನುಗಾರಿಕೆಯಲ್ಲಿ ಬಳಸವ ದೋಣಿ, ವಿವಿಧ ಬಗೆಯ ಬಲೆಗಳು, ಮೀನು ಸಾಕುವ ತೊಟ್ಟಿಯ ಸಣ್ಣ ಮಾದರಿ, ಮೀನು ಹಿಡಿಯುವ ಅನೇಕ ರೀತಿಯ ಪರಿಕರಗಳನ್ನು ಪ್ರದರ್ಶನಕ್ಕೆ ಇಡಲಾಯಿತು.

ಈ ಮತ್ಸ್ಯಮೇಳವು ರೈತ ದಸರದಲ್ಲಿ ಬಹು ಉಪಯುಕ್ತ ಕಾರ್ಯಕ್ರಮವಾಗಿತ್ತು. ನಗರದ ಜನತೆಗೆ ಮನರಂಜನೆಯನ್ನು ನೀಡುವ ಜೊತೆಗೆ ಗ್ರಾಮೀಣ ಭಾಗದ ರೈತರಿಗ ಭರಪೂರ ಮಾಹಿತಿಗಳ ಆಗರವೇ ಆಗಿತ್ತು. ಇಲ್ಲಿ ಮಾಹಿತಿ ಪಡೆದ ರೈತರು ಮೀನು ಕೃಷಿ ಮಾಡುವಲಿ ಆಸಕ್ತಿ ತೋರಿಸುವಲ್ಲಿ ಮುಂದಾದರು. ಈ ರೀತಿಯ ಕಾರ್ಯಕ್ರಮಗಳು ರೈತರ ಪ್ರಗತಿಗೆ ಸಹಾಯಕವಾಗುತ್ತವೆ.

# ರೈತ ದಸರಕ್ಕೆ ರಂಗುನೀಡಿದ ಹಾಲುಕರೆಯುವ ಸ್ಪರ್ಧೆ

**ಚಂದನ್ ಎಮ್.**

ಮೈಸೂರು: ಮೈಸೂರು ಐತಿಹಾಸಿಕ ದಸರಾ ಅಂಗವಾಗಿ ಹಮ್ಮಿಕೊಂಡಿದ್ದ ರೈತದಸರಾದ ಹಾಲು ಕರೆಯುವ ಸ್ಪರ್ಧೆ



ಹಾಲು ಕರೆಯುವ ಸ್ಪರ್ಧೆಯಲ್ಲಿ ನಿರತರಾಗಿರುವ ಸ್ಪರ್ಧಿ

14/10/2018 ಭಾನುವಾರದಂದು ಮೈಸೂರು ನಗರ ಗೋಪಾಲಕರ ಸಂಘ ಇವರ ಸಹಯೋಗದೊಂದಿಗೆ ರಾಜ್ಯ ಮಟ್ಟದ ಹಾಲು ಕರೆಯುವ ಸರ್ಧೆಯನ್ನು ಜೆ.ಕೆ ಮೈದಾನದಲ್ಲಿ ನಡೆಸಲಾಗಿತ್ತು. ಈ ಸ್ಪರ್ಧೆಯಲ್ಲಿ 37.200 ಲೀಟರ್ ಹಾಲು ಕರೆಯುವುದರ ಮೂಲಕ ಮೈಸೂರು ಉದಯಗಿರಿಯ ಪ್ರಜ್ವಲ್ ಕುಮಾರ್ ರವರು ಪ್ರಥಮಸ್ಥಾನ ಗಳಿಸಿದರು.

2018 ರೈತ ದಸರಾ ಅಂಗವಾಗಿ ನೆಡೆದ ಹಾಲು ಕರೆಯುವ ಸ್ಪರ್ಧೆಯಲ್ಲಿ ಅನೇಕ ಗೋಪಾಲಕರು ತಮ್ಮ ರಾಸುಗಳೊಡನೆ ಆಗಮಿಸಿದ್ದರು. ಈ ರಾಸುಗಳನ್ನು ವಿವಿಧ ಪರೀಕ್ಷೆಗಳಿಗೆ ಒಳಪಡಿಸಿ ಕೆಲವು ನೀತಿ – ನಿರ್ಬಂಧಗಳೊಡನೆ ರಾಜ್ಯದ 12 ರಾಸುಗಳನ್ನು ಆಯ್ಕೆ ಮಾಡಲಾಗಿದ್ದು. 13/10/2018 ರಂದು ಈ 12 ರಾಸುಗಳಿಗೆ ಪ್ರಥಮವಾಗಿ ಟ್ರಯಲ್ ನಡೆಸಲಾಗಿತ್ತು. 14/10/2018 ರಂದು ಎರಡು ಹಂತಗಳಲ್ಲಿ ಸ್ಪರ್ಧೆ ಜರುಗಿತು. ಪ್ರತಿ ಹಂತದಲ್ಲೂ 20 ನಿಮಿಷ ಕಾಲಾವಕಾಶ ನೀಡಲಾಗಿತ್ತು. ಮೊದಲನೇ ಹಂತ ಬೆಳಿಗ್ಗೆ 6.30ಕ್ಕೆ ನೇರವೇರಿದ್ದು ಈ ಹಂತದಲ್ಲಿ ಉದಯಗಿರಿಯ ಪ್ರಜ್ವಲ್ ಕುಮಾರ ಅವರಿಗಿಂತ, ಮತ್ತೊಬ್ಬ ಸ್ಪರ್ಧಿ ಬೆಂಗಳೂರಿನ ಸತೀಶ್ಕುಮಾರ್ ರವರು ಮುನ್ನಡೆ ಕಾಯ್ದುಕೊಂಡಿದ್ದರು, ಸಂಜೆ ವೇಳೆಗೆ ನಡೆದ ಸ್ಪರ್ಧೆಯಲ್ಲಿ ಪ್ರಜ್ವಲ್‌ರವರು 20.15 ಲೀಟರ್ ಹಾಲು ಕರೆದು ಒಟ್ಟು 37.200 ಲೀಟರ್ ಹಾಲು ಕರೆಯುವ ಮೂಲಕ ಪ್ರಥಮ ಸ್ಥಾನ ಪಡೆದರು.

.ಪ್ರಥಮ ಬಹುಮಾನವಾಗಿ 50.000, ದ್ವಿತೀಯ ಬಹುಮಾನ 40.000,ತೃತಿಯ ಬಹುಮಾನ 30.000 ಹಾಗು ನಾಲ್ಕನೆಯ ಬಹುಮಾನ 10.000 ರೂ ನಗದು ಬಹುಮಾನ ನೀಡಲಾಯಿತು.ಹಾಗು ಸ್ಪರ್ದೆಯಲ್ಲಿ ಬಾಗವಹಿಸಿದ ಎಲ್ಲಾಸ್ಪರ್ದಿಗಳಿಗು ಸಮಾದಾನಕರ ಬಹುಮಾನ ವಿತರಿಸಿದರು.

ಕಾರ್ಯಕ್ರಮದಲ್ಲಿ ಪಶುಸಂಗೋಪನ ಮಂತ್ರಿಗಳಾದ ವೆಂಕಟರಾವ್ ನಾಡಗೌಡ ರವರು ಮುಖ್ಯ ಅಥಿತಿಗಳಾಗಿದ್ದರು. ಈ ಸಂದರ್ಭದಲ್ಲಿ ಪಶುಸಂಗೋಪನೆಯನ್ನು ಪ್ರೇರೇಪಿಸುವ ಸಲುವಾಗಿ ಹೈನುಗಾರಿಕೆ, ಕುರಿಸಾಕಾಣಿಕೆ ಕೋಳಿ ಸಾಕಾಣಿಕೆ, ಮತ್ತು ಇನ್ನಿತರ ಕ್ಷೇತ್ರಗಳಲ್ಲಿ ಸಾಧಿಸಿದ ಸಾಧಕರಿಗೆ ಸನ್ಮಾನ ಕರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಈ ಹಿನ್ನಲೆಯಲ್ಲಿ ಪಶುಸಂಗೋಪನ ಮಂತ್ರಿಗಳಾದ ವೆಂಕಟರಾವ್ ನಾಡಗೌಡರವರು ರೈತರನ್ನು ಕುರಿತು ಮಾತನಾಡಿದರು, ಪಶುಸಂಗೋಪನೆಯು ಒಂದು ಉತ್ತಮ ಆರ್ಥಿಕ ಮೂಲವಾಗಿದೆ ಎಂದು ತಿಳಿಸಿದರು ಜೊತೆಗೆ ಸರ್ಕಾರದಿಂದ ಪಶುಸಂಗೋಪನೆಗೆ ಇರುವ ಸಹಾಯಧನ ಮತ್ತು ಅನುದಾನಗಳ ಬಗ್ಗೆ ಮಾಹಿತಿ ತಿಳಿಸಿದರು ಯುವಕರು ಹಳ್ಳಿಗಳನ್ನು ತೊರೆದು ನಗರಗಳನ್ನು ಸೇರಿ ಸಣ್ಣ ಕೆಲಸಗಳಿಗೆ ತೃಪ್ತಿ ಪಡುವುದು ಬಿಟ್ಟು ಹೈನುಗಾರಿಕೆಯನ್ನು ಮಾಡುವಂತೆ ತಮ್ಮ ಅನಿಸಿಕೆ ವ್ಯಕ್ತಪಡಿಸಿದರು.ಇದುವರೆಗು ರೈತರು ಕೃಷಿಯಲ್ಲಿ ನಷ್ಟ ಅನುಭವಿಸಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಆದರೆ ಹೈನುಗಾರಿಕೆಯನ್ನು ನಂಬಿದ ಯಾವ ಒಬ್ಬ ರೈತನು ಕೂಡ ಆತ್ಮಹತ್ಯೆ ಮಾಡಿಕೊಂಡಿಲ್ಲ ಎಂದು ಹೇಳುವುದರ ಮೂಲಕ ರೈತರು ಹೈನುಗಾರಿಕೆ ಬಗ್ಗೆ ಒಲವು ನೀಡಬೇಕೆಂದು ತಿಳಿಸಿದರು. ಇದೇ ಸಂದರ್ಭದಲ್ಲಿ ಸೋಮಶೇಖರ್ ನಿರ್ದೇಶಕರು ನಗರ ಪಾಲಿಕೆಯ ಗೋಪಾಲಕ ಸಂಘದ ಅಧ್ಯಕ್ಷರಾದ ನಾಗಭೂಷಣ್ ರವರು ಉಪಸ್ಥಿತರಿದ್ದರು.

ಈ ಸ್ಪರ್ಧೆಯಲ್ಲಿ ಪ್ರತಿವರ್ಷವು ಚಿತ್ರನಟ ದರ್ಶನ್‌ರವರು ಭಾಗವಹಿಸಿ ಹಾಲುಕರೆಯುವುದರ ಮೂಲಕ ಸ್ಪರ್ದೆಗೆ ಚಾಲನೆನೀಡುತ್ತಿದ್ದರು ಆದರೆ ಈ ವರ್ಷ ಅವರ ಆರೋಗ್ಯಸ್ಥಿತಿ ಸರಿಇಲ್ಲದಕಾರಣ ಅವರು ಸ್ಪರ್ದೆಗೆಬರಲು ಸಾದ್ಯವಾಗಲಿಲ್ಲ ಇದರಿಂದಾಗಿ ದರ್ಶನ್ ಅಭಿಮಾನಿಗಳು ಬೇಸರವ್ಯಕ್ತಪಡಿಸಿದರು.



ಹಾಲು ಕರೆಯುವ ಸ್ಪರ್ಧೆಯಲ್ಲಿ ವಿಜೇತರಾಧವರಿಗೆ ಪಶುಸಂಗೋಪನ ಮಂತ್ರಿಗಳಾದ ವೆಂಕರಾವ್ ನಾಡಗೌಡ ರವರು ಪ್ರಶಸ್ತಿಯನ್ನು ವಿತರಿಸಿದರು

# ನನ್ನ ದುಡಿಮೆ ಆರಂಭವಾಗಿದ್ದು ಚಿತ್ರರಂಗದಲ್ಲಿಯೇ : ಮಾನ್ಯ ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿ

**ಸಾಗರ್.**

ಮೈಸೂರು : ನಗರದ ಕಲಾಮಂದಿರದಲ್ಲಿ ಬುಧವಾರ ಆಯೋಜಿಸಿದ್ದ ದಸರಾ ಚಲನಚಿತ್ರೋತ್ಸವ ಉದ್ಘಾಟನಾ ಸಮಾರಂಭದಲ್ಲಿ ಚಲನಚಿತ್ರ ಅಕಾಡೆಮಿ ಅಧ್ಯಕ್ಷ ನಾಗತಿಹಳ್ಳಿ ಚಂದ್ರಶೇಖರ್ ಮಾತನಾಡುತ್ತಾ ಕಳೆದ 10 ವರ್ಷಗಳಿಂದ ಬೆಂಗಳೂರಿನಲ್ಲಿ ಅಂತರಾಷ್ಟ್ರೀಯ ಚಲನಚಿತ್ರೋತ್ಸವವನ್ನು ಆಯೋಜಿಸಲಾಗುತ್ತಿದೆ. ಆದರೆ ಇದನ್ನು ನಡೆಸಲು ನಿರ್ದಿಷ್ಟ ದಿನಾಂಕವಿಲ್ಲ. ಹಾಗಾಗಿ ಇದರ ಬಗ್ಗೆಸರ್ಕಾರದ ಮಟ್ಟದಲ್ಲಿ ಮಾತುಕತೆ ನಡೆಸಿ ಶೀಘ್ರವೇ ದಿನ ನಿಗದಿಸುವುದಾಗಿ ಹೇಳಿದರು. ದಿನ ನಿಗದಿಯಾದರೆ ಚಲನಚಿತ್ರೋತ್ಸವಕ್ಕೂ ವಿಶ್ವಮಾನ್ಯತೆ ದೊರೆತಂತಾಗುತ್ತದೆ. ಅದಕ್ಕಾಗಿ ಇಂದಿನ ಮುಖ್ಯಮಂತ್ರಿಗಳೊಂದಿಗೆ ಫೆಬ್ರವರಿಯಲ್ಲಿ ಚಿತ್ರೋತ್ಸವ ನಡೆಸಲು ಉದ್ದೇಶಿಸಿ ಮಾತುಕತೆ ನಡೆಸಲಾಗಿದೆ ಎಂದರು. ಬೆಂಗಳೂರಲ್ಲದೆ ಬೇರೆ ಕಡೆಯಲ್ಲೂ ಚಿತ್ರೋತ್ಸವ ನಡೆಸಲಾಗುತ್ತಿದ್ದು, ಮಂಗಳೂರಿನಲ್ಲಿ ಸೋದರಿ ಭಾಷೆಯ ಚಿತ್ರಗಳ ಪ್ರದರ್ಶನ ನಡೆಸಲಾಗಿದೆ, ಮುಂದೆ ಮೈಸೂರಿನಲ್ಲೂ ಭಾರತೀಯ ಪನೋರಮಾ ಚಿತ್ರಗಳ ಪ್ರರ್ದಶನ ನಡೆಸಲು ನಿರ್ಧರಿಸಿದ್ದು ನಗರ ಮತ್ತೊಂದು ಚಲನಚಿತ್ರೋತ್ಸವವನ್ನು ಕಾಣಬಹುದಾಗಿದೆ ತಿಳಿಸಿದರು.

ಅಂತರಾಷ್ಟ್ರೀಯ ಚಲನಚಿತ್ರೋತ್ಸವವನ್ನು ಫೆಬ್ರವರಿಯಲ್ಲಿ ಮಾಡುವ ಬದಲು ಮೊದಲು ವಾಕ್ ಚಿತ್ರ ತರೆಕಂಡ ದಿನ ಮಾರ್ಚ್ 4ರಂದು ಮಾಡಿದರೆ ಉತ್ತಮವೆಂದು ಇದೆ ಸಂದರ್ಭದಲ್ಲಿ ಮಾತನಾಡಿದರೆ ಕನ್ನಡ ಮತ್ತು ಸಂಸ್ಕೃತಿ ಸಚಿವೆ ಡಾ॥ ಜಯಮಾಲರವರು ಸಲಹೆ ನೀಡಿದರು ಮತ್ತು ಚಿತ್ರೋತ್ಸವದ ಕಿರುಚಿತ್ರಗಳು ಕೇವಲ ನಾಯಕರನ್ನೇ ಪ್ರಧಾನವಾಗಿ ತೋರಿಸಲಾಗುತ್ತಿದೆ. ಕೇವಲ ನಾಯಕರಿಂದ ಮಾತ್ರವಲ್ಲ ನಾಯಕಿಯರು, ತಂತ್ರಜ್ಞಾನರು, ಸಹ ಕಲಾವಿದರುಗಳಿಂದಲೂ ಸಹಾ ಕನ್ನಡ ಚಿತ್ರರಂಗ ಬೆಳೆದು ಬಂದಿದೆ ಹೀಗಾಗಿ ಇತ್ತಲೂ ಗಮನ ನೀಡಬೇಕು ಎಂದು ತಿಳಿಸಿದರು.

ಮೈಸೂರಿನಲ್ಲಿ ಚಿತ್ರ ನಗರಿ ನಿರ್ಮಾಣಕ್ಕಾಗಿ ಸಿದ್ದರಾಮಯ್ಯನವರು 100ಎಕರೆ ಜಾಗ ನೀಡಿದ್ದರು. ಈಗ ಹೆಚ್.ಡಿ ಕುಮಾರಸ್ವಾಮಿಯವರು 500ಎಕರೆ ನೀಡಲು ಮುಂದಾಗಿರುವುದು ಸಂತಸದ ಸಂಗತಿ ಎಂದು ಹೇಳಿದರು.

ಈ ಹಿಂದೆ ಮಾತನಾಡಿದ ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಹೆಚ್.ಡಿ ಕುಮಾರಸ್ವಾಮಿಯವರು ಮೈಸೂರಿಗೂ ಕನ್ನಡ ಚಿತ್ರರಂಗಕ್ಕೂ ಅವಿನಾಭಾವ ಸಂಭಂದವಿದೆ ಮೇಲುಕೋಟಿ ಶೂಟಿಂಗ್ ಮಹದೇವಪುರಗಳಲ್ಲಿ ಚಿತ್ರೀಕರಿಸಿದರೆ ಚಲನಚಿತ್ರ ಯಶಸ್ವಿ ಪ್ರರ್ದಶನ ಕಾಣುತ್ತದೆ ಎಂಬ ನಂಬಿಕೆ. ರಜನಿಕಾಂತರವರು ಸಹಾ ಅವರ ಚಿತ್ರಗಳನ್ನು ಮೇಲುಕೋಟೆಯಲ್ಲಿ ಚಿತ್ರೀಕರಿಸುತ್ತಾರೆ.

ಮೈಸೂರಿನಲ್ಲಿ ನನ್ನ ವೃತ್ತಿ ಜೀವನ ಆರಂಭಿಸಿ ಚೆನ್ನಿಕಾಂಬ ಫಿಲಂನ ಹಂಚಿಕೆದಾರನಾಗಿ ಯಶಸ್ಸು ಕಂಡೆ. ಇಂದಿಗೂ ನಾನು ಸೂರ್ಯವಂಶ ಚಿತ್ರವನ್ನು ನೆನಪಿಸಿಕೊಳ್ಳುತೇನೆ. ಅದು ಉತ್ತಮ ಪ್ರರ್ದಶನ ಕಂಡ ಸಿನಿಮಾ ಎಂದರು. ಈಗಿನ ಚಿತ್ರಗಳಲ್ಲಿ ಲಾಂಗ್ ಮಚ್ಚುಗಳನ್ನು ಕಡಿಮೆ ಮಾಡಿ ಉತ್ತಮ ಚಿತ್ರಗಳನ್ನು ತರುವ ನಿರ್ದೇಶಕರಿಗೆ ಪ್ರೋತ್ಸಾಹ ನೀಡಿ ಎಂದು ತಿಳಿಸಿದರು. ಜೊತೆಗೆ ಇಂದಿನಿಂದ 6ದಿನಗಳ ಕಾಲ ಚಲನಚಿತ್ರೋತ್ಸವವು ನಡೆಯಲ್ಲಿದ್ದು ಕನ್ನಡ, ತಮಿಳು, ಕೊಡವ ಹಾಗು ಅಂತರಾಷ್ಟ್ರೀಯ ಮಟ್ಟದ 25ಕ್ಕೂ ಹೆಚ್ಚಿನ ಚಲನಚಿತ್ರಗಳು ಪ್ರರ್ದಶನಗೊಳ್ಳಲಿದೆ ಎಂದರು.

ಸಚಿವರಾದ ಜಿ.ಟಿ ದೇವೆಗೌಡ, ಸಾ.ರಾ ಮಹೇಶ್, ಎನ್. ಮಹೇಶ್, ಶಾಸಕರಾದ ನಿರಂಜನ್ ಕುಮಾರ್, ಹರ್ಷವರ್ಧನ್, ನಾಗೇಂದ್ರ, ಅಶ್ವಿನ್ ಕುಮಾರ ಅನ್ನದಾನಿ ಡಿಸಿ ಅಭಿರಾಮ್, ಜಿ.ಶಂಕರ್, ಜಿ.ಪಂ ಅದ್ಯಕ್ಷೆ ನಯೀಮಾ ಸುಲ್ತಾನ್, ತಾ.ಪಂ ಅದ್ಯಕ್ಷೆ ಕಾಳಮ್ಮ, ಕೆಂಪರಾಮಯ್ಯ ಇನ್ನಿತರು ಉಪಸ್ಥಿತರಿದ್ದರು.

ಇದೇ ಸಂದರ್ಭದಲ್ಲಿ ದಸರಾ ಚಲನಚಿತ್ರೋತ್ಸವದ ಕಿರು ಚಿತ್ರ ಹಾಗೂ ಮಾಹಿತಿ ಪುಸ್ತಕವನ್ನು ಬಿಡುಗಡೆಮಾಡಲಾಯಿತು.



ಕಲಾಮಂದಿರದಲ್ಲಿ ದಸರಾ ಚಲನಚಿತ್ರೋತ್ಸವ ಉದ್ಘಾಟನಾ ಸಮಾರಂಭದಲ್ಲಿ (ಎಡದಿಂದ) ನಿರ್ದೇಶಕರಾದ ಸತ್ಯ ಪ್ರಕಾಶ್, ರಿಷಬ್ ಶೆಟ್ಟಿ, ನಟ ವಿಜಯ ರಾಘವೇಂದ್ರ, ನಟಿ ಪಾರೂಲ್ ಯಾದವ್, ನಿರ್ದೇಶಕ ನಾಗತಿಹಳ್ಳಿ ಚಂದ್ರಶೇಖರ್, ನಟಿ ಹರ್ಷಿಕಾ ಪೂಣಚ್ಚ, ನಿರ್ಮಾಪಕ ಚಿನ್ನೇಗೌಡ, ನಟರಾದ ಸೆಂಚುರಿ ಗೌಡ ಹಾಗೂ ಗಡ್ಡಪ್ಪ ಅವರನ್ನು ಸನ್ಮಾನಿಸಲಾಯಿತು

ಕೇರಳದಲ್ಲಿ ನಡೆದ ಸತ್ಯ ಘಟನೆ ಆದರಿಸಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಕಾಸರಗೋಡು ಚಿತ್ರವನ್ನು ನಿರ್ಮಿಸಿದ್ದೇನೆ. ಇದೊಂದು ಸಾಮಾಜಿಕ ಕಾಳಜಿ ಮೂಡಿಸುವ ಪ್ರಯತ್ನ. ವಿಪರ್ಯಾಸವೇನೆಂದರೆ ಚಿತ್ರೀಕರಣದ ನಡೆದ ಆ ಕಾಲೋನಿಯಲ್ಲಿ 42 ವಿದ್ಯಾರ್ಥಿಗಳಿದ್ದರು ಆದರೆ ಈಗ ಅದರ ಸಂಖ್ಯೆ 27ಕ್ಕೆ ಇಳಿದಿದೆ. ಇದಕ್ಕಾಗಿಯೇ ನಾನು ಅದನ್ನು ದತ್ತು ಪಡೆದಿದ್ದೇನೆ. ಇದೇ ರೀತಿ ಎಷ್ಟೋ ಕನ್ನಡ ಕಲೋನಿಗಳು ಮುಚ್ಚುತ್ತಿವೆ. ಈ ಬಗ್ಗೆ ಸರ್ಕಾರ ಗಮನ ಹರಿಸಬೇಕು ಎಂದು ಹೇಳಿದರು.
– ರಿಷಬ್ ಶೆಟ್ಟಿ ನಿರ್ದೇಶಕ



## ಯೋಗ ದಸರಾ ಮನೆ–ಮನೆ ಯೋಗ ಕಾರ್ಯಕ್ರಮ

ಜಗತ್ತಿನೆಲ್ಲೆಡೆ ವ್ಯಾಪಕವಾಗಿ ಪ್ರಸಿದ್ಧಿ ಹೊಂದುತ್ತಿರುವ ಯೋಗವನ್ನು, ಜಿಲ್ಲಾಡಳಿತ ಮೈಸೂರಿನ ಪ್ರತೀ ಮನೆ ಮನೆಗೂ ಯೋಗವನ್ನು ತಲುಪಿಸು ನಿಟ್ಟಿನಲ್ಲಿ. ಈ ಬಾರಿಯ ಯೋಗ ದಸರಾ ಪ್ರಮುಖ ವಿಷಯವನ್ನಾಗಿ ಮನೆ–ಮನೆ ಯೋಗ ಎಂಬ ಕಾರ್ಯಕ್ರಮವನ್ನು ಹಮ್ಮಿಕೊಂಡಿತ್ತು.

ದಸರಾದ ಯೋಗ ಕಾರ್ಯಕ್ರಮಗಳು ಕೆಲವು ಜಾಗಕ್ಕೆ ಸೀಮಿತವಾಗಿದಿದ್ದನ್ನು, ಎಲ್ಲ ಕಡೆಗೂ ತಲುಪಿಸಲು ಈ ಬಾರಿ ಮೆನ–ಮನೆ ಯೋಗ ಕಾರ್ಯಕ್ರಮ ಆಯೋಜಿಸಲಾಗಿತ್ತು . ನಗರದ ಆಯ್ದ 13ಕಡೆ ಪ್ರದೇಶದಲ್ಲಿ 12 ರಿಂದ 16ರ ವರೆಗೆ ಮನೆ–ಮನೆ ಯೋಗ ನಡೆಯಲ್ಲಿದ್ದು. ಆಯ್ದ ಪ್ರದೇಶದ ಉದ್ಯಾನವನಗಳ ಸಮೀಪ ಇರುವ ಪ್ರತೀ ಮನೆಗಳಿಗೂ ಆಹ್ವಾನ ನೀಡಲಾಗಿತ್ತು, ಇದಕ್ಕೆ ನಗದ ಎಲ್ಲ ಕಡೆಗಳಲ್ಲಿ ಉತ್ತಮ ಸ್ಪಂದನೆ ದೊರಕಿತ್ತು.

ಮನೆ–ಮನೆ ಯೋಗ ಕಾರ್ಯಕ್ರಮದ ಜೊತೆಗೆ, ಯೋಗ ದಸರಾ ಉಪಸಮಿತಿ, ಯೋಗ ಚರಣವನ್ನು ಚಾಮುಂಡಿ ಬೆಟ್ಟಕ್ಕೆ ಮತ್ತು ದಸರಾ ಯೋಗೋತ್ಸವನ್ನು ಅರಮನೆ ಆವರಣದಲ್ಲಿ ಹಾಗೂ ರಾಜ್ಯಮಟ್ಟದ ಯೋಗಾಸನ ಮತ್ತು ಯೋಗ ನೃತ್ಯರೂಪಕ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಯೋಗ ದಸರಾ ಕಾರ್ಯಕ್ರಮಕ್ಕೆ ಉತ್ತಮ ರೀತಿಯ ಪ್ರತಿಕ್ರಿಯೇ ಮೈಸೂರಿನ ಜನರಿಂದ ವ್ಯಾಕ್ತವಾಯಿತ್ತು.

## ರಾಜ್ಯ ಮಟ್ಟದ ಯೋಗಸನ ಸ್ಪರ್ಧೆ

**ಮನೋಷ್ ಕುಮಾರ್. ಎನ್ & ಮಂಜು**

ದಸರಾ ಉತ್ಸವದ ಅಂಗವಾಗಿ ವಸ್ತುಪ್ರದರ್ಶನ ಆವರಣದ ಪಿ.ಕಾಳಿಂಗರಾವ್ ಸಭಾಂಗಣದಲ್ಲಿ ಆಯೋಜಿಸಲಾಗಿದ್ದ ರಾಜ್ಯಮಟ್ಟದ ಯೋಗಸನ ಸ್ಪರ್ಧೆಯನ್ನು ಪ್ರೊ. ಕೆ. ಕೇಶವಮೂರ್ತಿ ಉದ್ಘಾಟಿಸಿದ್ದರು. ರಾಜ್ಯದ ನಾನಾ ಕಡೆಗಳಿಂದ ನಾನಾ ವಯೋಮಾನದ ಸುಮಾರು 800ಕ್ಕೂ ಸ್ಪರ್ಧಿಗಳು ಭಾಗವಹಿಸಿದ್ದರು. ಒಟ್ಟು 9 ವಿಭಾಗಗಳಲ್ಲಿ ಯೋಗಾಸನ ಸ್ಪರ್ಧೆ ನಡೆಯಾಲಾಯಿತು. 8 ರಿಂದ 60ವರ್ಷ ಮೇಲ್ಪಟ್ಟವರು ಸ್ಪರ್ಧೆಯಲ್ಲಿ ಭಾಗವಹಿಸಿದರು.

ವಿದೇಶಿಯರಿಂದಲೂ ಸ್ಪರ್ಧೆ : ಡೆನ್ಮಾರ್ಕ್, ಚೇನಾ< ಸೇರಿದಂತೆ ಅನೇಧಕ ವಿದೇಶಿಯರು ಸ್ಪರ್ಧೆಯಲ್ಲಿ ಆಸಕ್ತಯಿಂದ ಭಾಗವಹಿಸಿದ್ದರು.

ಹಿರಿಯ ನಾಗರಿಕ ಮತ್ತು ವಿಶೇಷಚೇತನರು ಕಷ್ಟಕರ ಯೋಗಾಸನ ಪ್ರದರ್ಶಿಸಿ ನೆರೆದಿದ್ದವರ ಮೆಚ್ಚುಗೆ ಗಳಿಸಿದರು.

ಯೋಗಸನ ಸ್ಪರ್ಧೆಯಲ್ಲಿ ಹಿರಿಯ ನಾಗರಿಕರು ಮತ್ತು ವಿಶೇಷ ಮಕ್ಕಳ ಯೋಗ ಪ್ರದರ್ಶನ ಪ್ರಧಾನ ಆಕರ್ಷಣೆಯಾಗಿತ್ತು. ದೇಹಕ್ಕೆ ವಯಸ್ಸು ಹೊರತು ಮನಸ್ಸಿಗಲ್ಲ ಎಂಬಂತೆ ಹಿರಿಜೀವಿಗಳು ವೀರಭದ್ರಾಸನ, ಜಾನು ಶೀರ್ಷಾಸನ, ಸರ್ವಾಂಗಸನ, ಧನುರಾಸನ ಪ್ರದರ್ಶಿಸಿ ಸೈ ಡನಿಸಿಕೊಂಡರು.

'ಟಚ್ ಎಂಡ್ ಫಿಲ್ಡ್ ಮೂಲಕ ಯೋಗಸನ ಕಲಿತಿದ್ದ ವಿಶೇಷ ಚೇತನ ಮಕ್ಕಳು ವೃಕ್ಷಾಸನ, ಉಷ್ಟ್ರಾಸನ, ಜಾನು ಶೀರ್ಷಾಸನ, ಧನುರಾಸನ ಪ್ರದರ್ಶಿಸಿ ನೆರದಿದ್ದ ಜನರ ಮನ ಗೆದ್ದರು. ನೀರಿಕ್ಷೆ ಶಾಲೆಯ ವೀಶೇಷ ಚೇತನ ಮಕ್ಕಳು ಹಾಗೂ ಗದಗ ಜಿಲ್ಲೆಯ ಹಗೊಳೆ–ಆಲೂ–ರಿನ ಜ್ಞಾನಸಿಂಧು ಅಂಧ ಮಕ್ಕಳ ವಸತಿಯುತ ಪ್ರಾಥಮಿಕ ಶಾಲೆ ವಿದ್ಯಾರ್ಥಿಗಲು ಸ್ಪರ್ಧೆಯಲ್ಲಿ ಭಾಗವಹಿಸಿ ನಾನಾ ಆಸನಗಳನ್ನು ಪ್ರದರ್ಶಿಸಿ ಎಲ್ಲರ ಗಮನ ಸೆಳೆದರು.

ಬೆಂಗಳೂರಿನ ಬಸವೇಶ್ವರನಗರದ 67ವರ್ಷದ ಹಿರಿಯ ಯೋಗಪಟ್ಟು ಶ್ಯಾಮ್ ಸುಂದರ್ ವಿಶೇಷಚೇತನರ ವಿಭಾಗದಲ್ಲಿ ಯೋಗಸಾನ ಪ್ರಧರ್ಶನಿಸಿ ಗಮನ ಸೆಳೆದರು. ಬಟ್ಟೆ ಕಾರ್ಖಾನೆಯೊಂದರಲ್ಲಿ ಕಣ್ಣು ಕಳೆದುಕೊಂಡ ಇವರು ಯೋಗಾಸನ ಅಭ್ಯಾಸ ಮಾಡುತ್ತ ಜಿವನದಲ್ಲಿ ಹೊಸ ಬೆಳಕು ಕಂಡುಕೊಂಡಿದ್ದಾರೆ.

ಆಸನಗಳು : 8 ರಿಂದ 45 ವರ್ಷದ ವರೆಗೆ ಮಹಿಳಾ ಮತ್ತು ಬಾಲಕಿಯರ ಪ್ರತ್ಯೇಕ ಸ್ಪರ್ಧೆ ನಡೆಯಿತು. ಸ್ಪರ್ಧೆಯಲ್ಲಿ ವೀರ ಭದ್ರಾಸನ, ವೃಕ್ಷಾಸನ, ಉಷ್ಟ್ರಾಸನ, ಧನುರಾಸನ , ನಾವಾಸನ, ಉತ್ಥಿತ್ತ ತ್ರಿಕೋನಾಸನ, ಹಲಾಸನ, ಮಕರಾಸನ, ಸರ್ವಾಂಗಾಸನ ಜಾಣು ಶೀರ್ಷಾಸನ, ಮತ್ಸ್ಯಾಸನ, ಚಕ್ರಾಸನಗಳನ್ನು ಪ್ರದರ್ಶಿಸಲಾಯಿತು. ರಾಜ್ಯದ ವಿವಿಧ ಭಾಗಗಳಿಂದ 34 ಯೋಗ ಪ್ರವೀಣರು ಸ್ಪರ್ಧೆಯಲ್ಲಿ ತೀರ್ಪುಗಾರರಾಗಿ ಭಾಗವಹಿಸಿದ್ದರು.

**ಯೋಗ ಸ್ಪರ್ಧೆಯಲ್ಲಿ ವಿಜೇತರ ಪಟ್ಟಿ**

14 ರಿಂದ 18 ವರ್ಷದೊಳಗಿನವರು:
ಬಾಲಕರ ವಿಭಾಗ: ಅಭಿಷೇಕ್ – 1, ಆರ್.ಸುಜನ್ – 2, ಲಲಿತ್ ಕುಮಾರ್ – 3
ಬಾಲಕಿಯರ ವಿಭಾಗ: ಜಿ.ಸೌಜನ್ಯ – 1, ಕೆ.ಟಿ.ಶೃತಿ – 2, ಯು.ಚಂದು ಪ್ರಿಯ – 3
18 ರಿಂದ 24 ವರ್ಷದೊಳಗಿನವರು: ಯುವಕರ ವಿಭಾಗ: ಎಂ.ಎಚ್.ರೋಹಿತ್ – 1, ಎಂ.ಶೇಖರ್ – 2, ಮಾರುತಿ – 3.

ಯುವತಿಯರ ವಿಭಾಗ: ಕಾಂಚನ ಗಂಗಾ – 1, ಆರ್. ರಕ್ಷಿತಾ – 2, ದೀಕ್ಷಿತಾ – 3
ಪುರುಷರ ವಿಭಾಗ: 25 ರಿಂದ 35 ವರ್ಷ: ದಾದಾ ಸಾಹೇಬ್ – 1, ಎಸ್.ಎಸ್.ವೆಂಕಟೇಶ್ – 2, ಪೂಜಾರ ಹುಚ್ಚಪ್ಪ – 3
35ರಿಂದ 45 ವರ್ಷ: ಸ್ವಾಮಿ ಮಲ್ಲಿಕಾರ್ಜುನಯ್ಯ – 1,, ಜಗದೀಶ್ – 2, ಆರ್.ಹೇಮಂತ್ – 3.
45 ರಿಂದ 60 ವರ್ಷ: ಲಿಂಗೇಶ್ – 1, ಸುರೇಶ್ ಕುಮಾರ್– 2, ಎ.ಪಾಂಡು – 3.
60 ವರ್ಷಕ್ಕಿಂತ ಮೇಲಿನವರು: ಮೋನಪ್ಪ ಪೂಜಾರಿ – 1, ವೀರಪ್ಪ ತಡಪತ್ತರಿ(2, ಬಿ.ಆರ್. ಗೋಪಾಲ ರಾಜು – 3
ಮಹಿಳೆಯರ ವಿಭಾಗ: 25 ರಿಂದ 35 ವರ್ಷ: ದಿವ್ಯ ಶೆಟ್ಟಿ – 1, ಎಂ.ಎಸ್.ಶಿಲ್ಪ – 2, ಆಶಾ – 3
35 ರಿಂದ 45 ವರ್ಷ: ರಮಾ – 1, ಲಕ್ಷ್ಮಿ – 2, ನೇತ್ರಾವತಿ – 3
45 ರಿಂದ 60 ವರ್ಷ: ವಿಮಲ ಜಯಪ್ರಕಾಶ್ – 1, ಡಿ.ರುಕ್ಮಿಣಿ – 2, ಸುಜಾತ – 3
60 ವರ್ಷಕ್ಕಿಂತ ಮೇಲಿನವರು: ಟಿ.ಎಸ್.ಸುಬ್ಬಲಕ್ಷ್ಮಿ – 1, ಎಂ.ಕೆ.ಶಾಮಲ – 2, ಮಂಜುಳಾ– 3.



ಯೋಗ ಸ್ಪರ್ಧೆಯಲ್ಲಿ ನಿರತರಾಗಿರುವ ಸ್ಪರ್ಧಿಗಳು

## ದಸರಾ ಕವಿಗೋಷ್ಠಿ [ಚಿಗುರು ಕವಿಗೋಷ್ಠಿ]



ದಸರ ಕವಿಗೋಷ್ಟಿಯಲ್ಲಿ ನಾಡೋಜ ಕವಿ ಹಂಪನಾಗರಾಜಯ್ಯ ಕವಿಗೋಷ್ಟೀಯಲ್ಲಿ ಮಾತನಡುತ್ತಿರುವುದು.

**ಮೇಘ ಎಂ & ಮಹೇಶ್**

ಮೈಸೂರು : ಅಕ್ಟೋಬರ್ 12 ರಂದು ಮೈಸೂರಿನಲ್ಲಿ ಮಾನಸ ಗಂಗೋತ್ರಿಯ ರಾಣಿಬಹೂದ್ದೂರ್ ಸಭಾಂಗಣದಲ್ಲಿ ಶುಕ್ರವಾರ ದಸರ ಕವಿಗೋಷ್ಟಿ ಹಮ್ಮಿಕೊಳ್ಳಲಾಯಿತು ಕಾರ್ಯಕ್ರಮಕ್ಕೆ ಆಗಮಿಸಿದ ಹಿರಿಯ ಸಾಹಿತಿ ನಾಡೋಜ ಡಾ.ಹಂಪನಾಗರಾಜಯ್ಯ ಉದ್ಘಾಟನ ಸಮಾರಂಭದಲ್ಲಿ ಪಾಲ್ಗೊಂಡಿದರು ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದ ಹಂಪರವರು ನಾಜೂಕಿನ ನಾರಿ ಜನಜಂಗುಳಿ ಇರುವಲ್ಲಿ ಮೈ ತೋರಿ ಗಾಳಿಯ ಎದುರಿ ತುಳುಕುವಳು ಮಾದಕತೆಯ ಬೀರಿ ಎಂದು ಹೇಳುವ ಮೂಲಕ ತಮ್ಮದೇ ರೀತಿಯಲ್ಲಿ ಎಲ್ಲರನ್ನು ಗಮನ ಸೆಳೆದರು

ಮಾದಕ ಚೆಲುವೆಯ ವೈಯ್ಯಾರವನ್ನ ಬಣ್ಣಿಸಿದ ಹಂಪನಾ ಅವರು ವ್ಯಕ್ತಿಯೊಬ್ಬ ಬದುಕಿದ್ದಾಗ ನೀಡುವ ಕೊಡುಗೆಗೆ ಆಗಲೇ ಶ್ರೇಯಸ್ಸು ದಕ್ಕಬೇಕೆಂದು ಸಂದೇಶ ಹೊಂದಿರುವ ತಮ್ಮದೆ ಕವನ ವಾಚಿಸಿದರು ಸತ್ತಮೇಲೆ ಸುರಿಯುವ ಬಂಡಿಗಟ್ಟಲೆ ಹೂ ರಾಶಿಗಿಂತ ಬದುಕಿದ್ದಾಗ ಕೈ ಕುಲುಕುವ ಕೊಡುವ ಒಂದು ಹೂ ಮಿಗಿಲು ಎಂದು ಹೇಳಿದ್ದರು ಕವಿಗಳಿಗೆ ಪ್ರೀತಿಪಾತ್ರರಾದವರು ಎಂದರೆ ಕವಿಗಳಿಗೆ ಸಹೃದಯದವರು ಇಂತಹ ಸಹೃದಯದ ಸಭೆ ಬಹಳ ಪ್ರಿಯವಾದದ್ದು ಸಹೃದಯ ಬೇರೆ ಓದುಗ ಬೇರೆ ಇಂಗ್ಲೀಷ್‌ನಲ್ಲಿ ಸಹೃದಯ ಪದಕ್ಕೆ ಸಮನಾವಾದ ಬೇರೆ ಪದ ಇಲ್ಲ ಓದುಗ ಎಂದರೆ ರೀಡರ್, ನ್ಯೂಸ್‌ಪೇಪರ್ ಪುಸ್ತಕ ಕಾವ್ಯವನ್ನು ಓದುವವನು ಓದುಗ ,ಆದರೆ ಕಾವ್ಯವನ್ನು ಓದಲು ಬೇಕಾಗಿರುವ ಸಿದ್ದತೆ ಇರುವವನು ಆತ ಸಹೃದಯಿ ಶಬ್ದವನ್ನು ಮೀರಿದ ಅರ್ಥವನ್ನು ಕೋಡುವವನು ಕವಿ ಕವಿಯಾದವನು ಭಾವಲೋಕದ ವಿಹರಿಸಿ ಆನಂದಿಸುತ್ತಾರೆ

ಕವಿಗೋಷ್ಟಿಯಲ್ಲಿ 30 ಮಂದಿ ವಿದ್ಯಾರ್ಥಿಗಳು ಕವನಗಳನ್ನು ವಾಚಿಸಿದರು ಇವರ ಕವನಗಳಲ್ಲಿ ಈಗಿನ ಸಾಮಾಜಿಕ ಸಮಸ್ಯೆಗಳು ಜಾತಿಪದ್ದತಿಯ ಕೌರ್ಯ ನೆರೆಹಾವಳಿ ಅಮ್ಮನ ಪ್ರೀತಿ ಸೇರಿದಂತೆ ಇನ್ನಿತರ ವಸ್ತುವಿಷಯಗಳನ್ನು ಒಳಗೊಂಡ ಕವಿತೆಗಳು ಅನಾವರಣಗೊಂಡವು.

ಮುಖ್ಯ ಅಥಿತಿಗಳು ಪ್ರೋ. ಕೃಷ್ಣೆಗೌಡರು ಸಹ ಆಗಮಿಸಿದರು. ಕಾರ್ಯಕ್ರಮದಲ್ಲಿ ಮೈಸೂರು ವಿವಿ ಕುಲಸಚಿವ ಹಾಗು ದಸರಾ ಕವಿಗೋಷ್ಟಿ ಉಪಸಮಿತಿ ವಿಶೇಷ ಅದಿಕಾರಿ ಪ್ರೋ ಆರ್ ರಾಜಣ್ಣ ಕವಿಗಳಾದ ಚಿಂತಮಣಿ ಕೋಡ್ಲೆಕೆರೆ ಡಾ. ಟಿ ಯಲ್ಲಪ್ಪ ದಸರಕವಿಗೋಷ್ಟಿ ಉಪಸಮಿತಿ ಕಾರ್ಯಧ್ಯಕ್ಷರು ಪ್ರೋ. ಎಮ್ ಜಿ ಮಂಜುನಾಥ್ ಕಾರ್ಯದರ್ಶಿ ಎಮ್ ಎಸ್ ಮರಿಸ್ವಾಮಿ ಇತರರಿದ್ದರು..

# ಪ್ರಧಾನ ಕವಿಗೋಷ್ಠಿ: ಕಾವ್ಯಗಳಲ್ಲಿ ಭಾವನೆ ಹರಿಸಿದ ಕವಿಗಳು



ಸಚಿವ ಜಿ.ಟಿ.ದೇವೇಗೌಡರು ಕವಿಗೋಷ್ಠಿ ಉದ್ಘಾಟಿಸಿದರು.

**ಮಂಜುನಾಥ್& ಮೇಘ.**

ಮೈಸೂರು: ಕವಿಯನ್ನು ನೀವು ಬಂಧಿಸಬಹುದು... ಕವಿತೆಯನಲ್ಲ ಪದ್ಯವನಲ್ಲ... ನಮ್ ಧ್ವನಿಯನ್ನಂತೂ ಅಲ್ಲವೇ ಅಲ್ಲ.? ಅರೆರೆರೆರೆರೇ ಕೇಳಿರಿ ಕೇಳಿರಿ ಸಭಾಸದರೇ ನನ್ನಯ ಕಾಲದ ಹಾಡನ್ನ?

ಹೀಗೆಂದು ಕವಿ ಅರುಣ್ ಜೋಳದ ಕೂಡ್ಲಿಗಿ ಕವನ ವಾಚಿಸುತ್ತಿದ್ದರೆ ಸಭಾಂಗಣದಲ್ಲಿ ಹಲವಾರು ಯೋಚನೆಗಳು ಕವಲೊಡೆದಿದ್ದವು.

ಜಗನ್ಮೋಹನ ಅರಮನೆ ಸಭಾಂಗಣದಲ್ಲಿ ಸೋಮವಾರ ದಸರಾ ಪ್ರಯುಕ್ತ ನಡೆದ ಪ್ರಧಾನ ಕವಿಗೋಷ್ಠಿಯಲ್ಲಿ ತೆರೆದುಕೊಂಡ ಕವಿತೆ ಪ್ರಪಂಚವಿದು.

ಕೂಡಿಗೆ ತಮ್ಮ ಕವನದಲ್ಲಿ ಒಂದೆಡೆ ಸೆಲ್ಫಿ, ಲೈಕು, ಕಮೆಂಟು, ಶೇರು... ಆನ್‌ಲೈನ್ ಔಷಧ, ಬ್ರೇಕಿಂಗ್ ನ್ಯೂಸ್... ಕಾರ್ಪೊರೇಟ್ ದರ್ಪವನ್ನು ವ್ಯಂಗ್ಯವಾಗಿ ದರ್ಶನ ಮಾಡಿಸಿದರು. ಬಾಡಿದ ಪೈರು, ಕೂಲಿ ಅರಸುತಾ ಹೊರಟ ಕಾರ್ಮಿಕರ ವ್ಯಥೆಯ ಚಿತ್ರಣವೂ ಅದರಲ್ಲಿ ಅಡಗಿತ್ತು.

ಸುಮಾರು 30 ಕವಿಗಳು ಮಗು, ಅಪ್ಪ, ಕುವೆಂಪು, ಅಟಲ್ ಬಿಹಾರಿ ವಾಜಪೇಯಿ, ಅಕ್ಕಮಹಾದೇವಿ, ಕೊಡಗಿನ ರೌದ್ರ ನರ್ತನ ಸೇರಿದಂತೆ ಹಲವು ವಿಚಾರಗಳ ಮೇಲೆ ಕಾವ್ಯ ಸುಧೆ ಹರಿಸಿದರು.

‘ಹುಟ್ಟಿ ಬನ್ನಿ ಮತ್ತೊಮ್ಮೆ ಅಟಲ್‌ಜೀ’ ಕವನ ವಾಚಿಸಿದ್ದು ವೈದ್ಯ ಎಚ್.ಎಸ್.ರುದ್ರೇಶ್. ‘ವಿಧಿಯೇ ಹಲವು ವರ್ಷಗಳ ಹಿಂದೆಯೇ ತೊಡಿಸಿದ್ದೆ ಸಾವಿನ ಕುಣಿಕೆಯ ಅವರ ಕೊರಳಿಗೆ... ಹಂತ ಹಂತವಾಗಿ ಕುಣಿಕೆಯ ಬಿಗಿಗೊಳಿಸುತ್ತ ಅಂತ್ಯ ಹಾಡಲು ಕಾಯುತ್ತಿದ್ದೆ ಅವರ ಬದುಕಿಗೆ’ ಎಂದು ಅಟಲ್ ಜೀವನದ ಕೊನೆಯ ಕ್ಷಣಗಳನ್ನು ವೈದ್ಯರಾಗಿ ನೋಡಿದ ಬಗೆಯನ್ನು ವಿವರಿಸಿದರು.

ಕನ್ನಡಿಗ ನಾರಾಯಣ ಅವರು ಜಾಜಿ ಹೂವಿನ ಮರದ ಬಗೆಗೆ ತಿಳಿಸುತ್ತಾ ‘ಹಸಿರು ಮರಕ್ಕೆ ಕೆಂಪು ರಗ್ಗು ಹೊದಿಸಿದೆಯೆಂದು ಸೃಷ್ಟಿ ವೈಚಿತ್ರ್ಯದ ಬಗ್ಗೆ ಕವಿತೆ ಬರೆದಾಗಲೂ ಅದರ ಹೆಸರು ಗುಲ್ಮೊಹರ್ ಅಂತ ಗೊತ್ತೇ ಇರಲಿಲ್ಲ ಎಂದು ಪ್ರಕೃತಿ ಸೊಬಗಿನ ವೈಶಿಷ್ಟ್ಯ ಸಾರಿದರು.

ಉಪನ್ಯಾಸಕ ಶಿರಗಾನಹಳ್ಳಿ ಶಾಂತನಾಯ್ಕ್ ಮತ್ತು ಶಿಕ್ಷಕ ಟಿ.ಸತೀಶ್ ಜವರೇಗೌಡ ಅವರ ಅಪ್ಪ ಕವನಗಳು, ರಾಧಾಕೃಷ್ಣ ಬೆಳ್ಳೂರು ವಾಚಿಸಿದ ಬುದ್ಧನ ಕುರಿತಾದ ಕಾವ್ಯ, ಲಕ್ಷ್ಮೀಪತಿ ಕೋಲಾರ ಅವರ ದಲಿತ ಚಳವಳಿಯ ಹಿನ್ನೋಟ, ಯಲ್ಲಪ್ಪ ಕೆ.ಕೆ.ಪುರ ಅವರ ಕುಕ್ಕರಹಳ್ಳಿ ಕೆರೆ ಕುರಿತಾದ ಕವನ, ಕೊಡಗಿನ ಕುರಿತು ಟಿ.ಗೋವಿಂದರಾಜು ವಿವರಿಸಿದ ಕವನದ ಸಾಲುಗಳು ಗಮನ ಸೆಳೆದವು.

‘ಕುವೆಂಪು ಕೂತಿದ್ದಾರೆ ನಮ್ಮ ನಿಮ್ಮ ನಡುವೆ, ನಿರಾಕಾರ ಶಿಖರವಾಗಿ; ಈ ಕ್ಷಣದ ನಮ್ಮ ನಿಮ್ಮೆಲ್ಲರ ಜೀವ ಕಣಕಣದ ಚೇತನವಾಗಿ’ ಎಂದು ಚಂದ್ರಶೇಖರ ತಾಳ್ಯ ಅವರು ಕಾವ್ಯದ ಮೂಲಕ ರಸಋಷಿಯನ್ನು ನೆನೆದರೆ, ಡಾ.ವಿಜಯಶ್ರೀ ಸಬರದ ‘ಕದಳಿಯ ದಾರಿ ತಪ್ಪಿಸಿಕೊಂಡ ಅಕ್ಕ ಮೈಸೂರಿಗೆ ಬಂದಿದ್ದಾಳೆ. ನೋಡುತ್ತಾಳೆ ಎದುರಿಗೆ ತನ್ನದೇ ಮೂರ್ತಿ ನೋಡಿ ದಿಗ್ಭ್ರಾಂತಳಾಗುತ್ತಾಳೆ’ ಎಂದು ಅಕ್ಕಮಹಾದೇವಿಯ ಚಿಂತನೆಗಳನ್ನು ಇಂದಿನ ಕಾಲಮಾನಕ್ಕೆ ಅನ್ವಯಿಸಿ ನೋಡಿದರು.

ಸ್ಫೂರ್ತಿ ಹರವು, ಹನುಮಂತರಾವ ಬಿ.ದೊಡ್ಡಮನಿ, ಮಾರ್ಕಂಡಪುರಂ ಶ್ರೀನಿವಾಸ, ಎನ್.ಕೆ.ರಾಮಶೇಷನ್, ಚಂದ್ರಕಾಂತ ಪಡೇಸೂರ, ಬಸವರಾಜು ವಕ್ಕುಂದ, ಎಲ್.ಎನ್.ಮುಕುಂದರಾಜ್, ಸಂತೋಷ ಚೊಕ್ಕಾಡಿ, ನಿಜಲಿಂಗಪ್ಪ ಮಟ್ಟಿಹಾಳ, ಲಿಂಗಣ್ಣ ಗೊನಾಳ ಕವನ ವಾಚಿಸಿದರು.

ಕೋಲಾರ ಜಿಲ್ಲೆಯ ಪನಸಮಾಕನಹಳ್ಳಿ ಆರ್.ಚೌಡರೆಡ್ಡಿ ‘ಮಾತು ಮೌನದ ನಡುವೆ’ ವಿಷಯವಾಗಿ ಕವನ ಪ್ರಸ್ತುತಪಡಿಸಿದರು.

ಇದಕ್ಕೂ ಮೊದಲು ಸಚಿವ ಜಿ.ಟಿ.ದೇವೇಗೌಡರು ಕವಿಗೋಷ್ಠಿ ಉದ್ಘಾಟಿಸಿದರು. ‘ಕವಿತೆಯಲ್ಲಿ ಬದುಕುವ ವಿಧಾನವಿದೆ. ಜೀವನದಲ್ಲಿ ಅಳವಡಿಸಿಕೊಳ್ಳಬೇಕಾದ ಮೌಲ್ಯಗಳಿವೆ. ಸಮಾಜಕ್ಕೆ ಮಾರ್ಗದರ್ಶನ ನೀಡುತ್ತಿವೆ’ ಎಂದು ಹೇಳಿದರು.

ಕವಯತ್ರಿ ಡಾ.ಸುಕನ್ಯಾ ಮಾರುತಿ ಅಧ್ಯಕ್ಷತೆ ವಹಿಸಿದ್ದರು. ಮೈಸೂರು ವಿಶ್ವವಿದ್ಯಾನಿಲಯದ ಕುಲಸಚಿವ ಪ್ರೊ.ಆರ್.ರಾಜಣ್ಣ, ದಸರಾ ಕವಿಗೋಷ್ಠಿ ಉಪಸಮಿತಿಯ ಕಾರ್ಯಾಧ್ಯಕ್ಷ ಪ್ರೊ.ಎಂ.ಜಿ.ಮಂಜುನಾಥ್, ಕಾರ್ಯದರ್ಶಿ ಎಂ.ಎಸ್.ಮರಿಸ್ವಾಮಿ ಇದ್ದರು.

‘ಸಜ್ಜನರ ನಿಷ್ಕ್ರಿಯತೆ ಅಪಾಯಕಾರಿ’

‘ವರ್ತಮಾನದ ಬಿಕ್ಕಟ್ಟುಗಳಿಗೆ ಮುಖಾಮುಖಿಯಾಗದಿರುವ ಯಾವೊಬ್ಬ ಲೇಖಕ, ಕವಿ ಪ್ರಸ್ತುತನಲ್ಲ. ಹಾಗೆಯೇ ಸಜ್ಜನರ ನಿಷ್ಕ್ರಿಯತೆ ಅಪಾಯಕಾರಿ’ ಎಂದು ಸಾಹಿತಿ ಶ್ರೀಕಂಠ ಕೂಡಿಗೆ ತಿಳಿಸಿದರು.

‘ಒಳ್ಳೆಯ ಬದುಕನ್ನು ನಡೆಸುವವರು ಉತ್ತಮ ಕವಿಗಳಾಗಬಹುದು. ಈಗ ಒಳ್ಳೆಯ ಕವಿತೆಯೂ ಇಲ್ಲ; ಒಳ್ಳೆಯ ಬದುಕೂ ಇಲ್ಲ’ ಎಂದರು.

‘ಶಿಕ್ಷಣದಿಂದ ಏನು ಬದಲಾವಣೆ ಆಗಿದೆ. ಅನಕ್ಷರ ಜಾತಿವಾದಿ ಅಕ್ಷರ ಜಾತಿವಾದಿಯಾಗಿಯೂ, ಅನಕ್ಷರ ಜಾತಿವಾದಿ ಅಕ್ಷರ ಜಾತಿವಾದಿಯಾಗಿಯೂ, ಅನಕ್ಷರ ಮೂಢನಂಬಿಕಸ್ತ ಅಕ್ಷರ ವ್ಂೂಢ್ನ್ಂಬಿಕ್ಸ್್ನಾಗಿಂ್ಂೂ ಹೊರಹೊಮ್ಮಿದ್ದಾರೆ’ ಎಂದು ಲೇವಡಿ ಮಾಡಿದರು.

ಹಿಂದಿ, ಸಂಸ್ಕೃತ, ಕೊಡವ, ತುಳು?

ಕವಿಗೋಷ್ಠಿ ಕೇವಲ ಕನ್ನಡದ ಕವನಗಳಿಗಷ್ಟೇ ಸೀಮಿತವಾಗಿರಲಿಲ್ಲ. ತುಳು, ಕೊಂಕಣಿ, ಕೊಡವ, ಸಂಸ್ಕೃತ, ಹಿಂದಿ ಭಾಷೆಯ ಕಾವ್ಯಗಳ ಘಮಲೂ ಇತ್ತು.

ಡಾ.ಟಿ.ಎಂ.ಎನ್.ಖಂಡಿಗೆ ಅವರು ತುಳುವಿನ ‘ಹುಲಿ ಬಂತು ಹುಲಿ, ಐದು ವರ್ಷದ ಹುಲಿ’ ಕವನವನ್ನು ಚುನಾವಣೆಯ ಅಣಕಕ್ಕೆ ಬಳಸಿಕೊಂಡರು. ಕೊಡವ ಭಾಷೆಯಲ್ಲಿ ಕವನ ವಾಚಿಸಿದ ಕಾವೇರಿ ಉದಯ ಅವರು ಕೊಡಗಿನ ಪ್ರವಾಹ ಪರಿಸ್ಥಿತಿ ಬಿಚ್ಚಿಟ್ಟರು. ಪೂರ್ಣಿಮಾ ಅವರು ಕೊಂಕಣಿ ಕವನ ವಾಚಿಸಿದರು. ಸುರೇಶ ಹೆಗಡೆ ಸಂಸ್ಕೃತ ಕವನ ಮತ್ತು ಶಶಿಕಲಾಗೌಡ ಹಿಂದಿ ಕವನ ಪ್ರಸ್ತುತಪಡಿಸಿದರು.

# ದಸರಾ ಕ್ರೀಡಾಕೂಟಕ್ಕೆ ಚಾಲನೆ



ದಸರಾ ಕ್ರೀಡಾಕೂಟದ ಉದ್ಘಾಟನಾ ಸಮಾರಂಭದಲ್ಲಿ ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿ ಅವರು ಕ್ರೀಡಾಜ್ಯೋತಿ ಎತ್ತಿಹಿಡಿದರು. ಜಿ.ಟಿ.ದೇವೇಗೌಡ, ಗೋವಿಂದರಾಜ್, ಎಂ.ಆರ್.ಪೂವಮ್ಮ, ಎನ್.ಮಹೇಶ್, ಸುರೇಶ್ ಇದ್ದಾರೆ

**ಗೌತಮ್.**

ಮೈಸೂರು: ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿ ಬುಧವಾರ ಸಂಜೆ ನಡೆದ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿ ಸಮ್ಮುಖದಲ್ಲಿ ಅಂತರರಾಷ್ಟ್ರೀಯ ಅಥ್ಲೀಟ್ ಎಂ.ಆರ್.ಪೂವಮ್ಮ ಅವರು ಕ್ರೀಡಾಕೂಟಕ್ಕೆ ಚಾಲನೆ ನೀಡಿದರು.

‘ದಸರಾ ಸಿ.ಎಂ ಕಪ್ ಕ್ರೀಡಾಕೂಟಕ್ಕೆ ಚಾಲನೆ ದೊರೆತಿದೆ’ ಎಂದು ಎಚ್.ಡಿ. ಕುಮಾರಸ್ವಾಮಿ ಅವರು ಪ್ರಕಟಿಸಿದರು. ಅ.16ರ ವರೆಗೆ ನಡೆಯಲಿರುವ ಕ್ರೀಡಾಕೂಟದಲ್ಲಿ 31 ಕ್ರೀಡೆಗಳನ್ನು ಆಯೋಜಿಸಲಾಗಿದ್ದು, ರಾಜ್ಯದ ವಿವಿಧ ಜಿಲ್ಲೆಗಳ 4,500 ಕ್ಕೂ ಅಧಿಕ ಕ್ರೀಡಾಪಟುಗಳು ಪಾಲ್ಗೊಂಡಿದ್ದಾರೆ.

ದಸರಾ ಕ್ರೀಡಾಕೂಟದ ಕ್ರೀಡಾ ಜ್ಯೋತಿಯ ಯಾತ್ರೆಗೆ ಬುಧವಾರ ಬೆಳಿಗ್ಗೆ ಚಾಮುಂಡಿ ಬೆಟ್ಟದಲ್ಲಿ ಚಾಲನೆ ನೀಡಲಾಗಿತ್ತು. ನಗರದ ಪ್ರಮುಖ ರಸ್ತೆಗಳಲ್ಲಿ ಕ್ರೀಡಾಜ್ಯೋತಿ ರಿಲೇ ನಡೆದು ಸಂಜೆ ನಜರಾಬಾದ್‌ನ ನಿಂಬುಜಾಂಬ ದೇವಸ್ಥಾನಕ್ಕೆ ತರಲಾಯಿತು.

ಕ್ರೀಡಾಕೂಟದ ಉದ್ಘಾಟನೆ ವೇಳೆ ಕ್ರೀಡಾಪಟುಗಳಾದ ಸಂಧ್ಯಾ, ಶಿವಲಿಂಗಮ್ಮ ಮತ್ತು ನೈದಿಲೆ ಅವರು ಜ್ಯೋತಿಯನ್ನು ಕ್ರೀಡಾಂಗಣಕ್ಕೆ ತಂದರು. ಮುಖ್ಯಮಂತ್ರಿ ಕುಮಾರಸ್ವಾಮಿ ಅವರು ಜ್ಯೋತಿಯನ್ನು ಪೂವಮ್ಮ ಅವರಿಗೆ ಹಸ್ತಾಂತರಿಸಿದರು. ಆ ಬಳಿಕ ಕ್ರೀಡಾಂಗಣದಲ್ಲಿರುವ ಜ್ಯೋತಿ ಬೆಳಗಿಸಲಾಯಿತು. ಅಥ್ಲೀಟ್‌ಗಳಾದ ಧನುಷಾ ಮತ್ತು ದಿಲೀಪ್ ಅವರು ಕ್ರೀಡಾಪಟುಗಳ ಪರವಾಗಿ ಪ್ರಮಾಣವಚನ ಸ್ವೀಕರಿಸಿದರು. ಕಾರ್ಯಕ್ರಮದಲ್ಲಿ ಕ್ರೀಡಾ ಇಲಾಖೆ ವತಿಯಿಂದ ಪೂವಮ್ಮ ಅವರನ್ನು ಸನ್ಮಾನಿಸಲಾಯಿತು.

8 ವಿಭಾಗದ ಕ್ರೀಡೆಗಳಿಗೆ ಬುಧವಾರ ಚಾಲನೆ ಲಭಿಸಿತು. ಅಥ್ಲೆಟಿಕ್ ಕೂಟ ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿ ಅ.14 ರಿಂದ 16ರವರೆಗೆ ನಡೆಯಿತ್ತು.. ಈಜು ಸ್ಪರ್ಧೆ ಚಾಮುಂಡಿವಿಹಾರ ಈಜುಕೊಳದಲ್ಲಿ ಅ.13 ರಿಂದ 15ರ ವರೆಗೆ ಆಯೋಜಿಸಲಾಗಿದೆ.

ಸಚಿವರಾದ ಜಿ.ಟಿ.ದೇವೇಗೌಡ, ಸಾ.ರಾ.ಮಹೇಶ್, ಎನ್.ಮಹೇಶ್, ಕ್ರೀಡಾ ಇಲಾಖೆ ಆಯುಕ್ತ ಡಾ.ಎನ್.ಶಿವಶಂಕರ, ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ರಜನೀಶ್ ಗೋಯೆಲ್, ಕರ್ನಾಟಕ ಒಲಿಂಪಿಕ್ ಸಂಸ್ಥೆ ಅಧ್ಯಕ್ಷ ಕೆ.ಗೋವಿಂದರಾಜ್, ಅನಂತರಾಜು, ಶಾಸಕ ಅಶ್ವಿನ್ ಕುಮಾರ್, ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕ ಕೆ.ಸುರೇಶ್, ಜಿಲ್ಲಾಧಿಕಾರಿ ಅಭಿರಾಮ್ ಜಿ. ಶಂಕರ್ ಭಾಗವಹಿಸಿದ್ದರು.

ಯುವ ಪ್ರತಿಭೆಗಳಿಗೆ ವೇದಿಕೆ: ದಸರಾ ಕ್ರೀಡಾಕೂಟದ ಉದ್ಘಾಟಿಸುವ ಅವಕಾಶ ಸಿಕ್ಕಿರುವುದು ಸಂತಸ ಉಂಟುಮಾಡಿದೆ. ನಾನು ದಸರಾದಲ್ಲಿ ಒಮ್ಮೆಯೂ ಪಾಲ್ಗೊಂಡಿಲ್ಲ ಎಂದು ಪೂವಮ್ಮ ಹೇಳಿದರು.

ಇಂತಹ ಕೂಟಗಳು ಯುವ ಪ್ರತಿಭೆಗಳಿಗೆ ತಮ್ಮ ಸಾಮರ್ಥ್ಯ ತೋರಿಸಲು ಉತ್ತಮ ವೇದಿಕೆ ಎನಿಸಿದೆ. ಕ್ರೀಡೆಯಲ್ಲಿ ಸೋಲು?ಗೆಲುವು ಇದ್ದೇ ಇದೆ. ಇಲ್ಲಿಗೆ ಬಂದ ಎಲ್ಲರಿಗೂ ಗೆಲ್ಲಲು ಸಾಧ್ಯವಿಲ್ಲ. ಸೋತವರು ತಮ್ಮ ತಪ್ಪು ತಿದ್ದಿಕೊಂಡು ಮುಂದಿನ ಬಾರಿ ಉತ್ತಮ ಪ್ರದರ್ಶನ ನೀಡಲು ಪ್ರಯತ್ನಿಸಬೇಕು ಎಂದು ಸಲಹೆ ನೀಡಿದರು.

ಮುಂಬರುವ ದೋಹಾ ಏಷ್ಯನ್ ಚಾಂಪಿಯನ್‌ಷಿಪ್ ಮೇಲೆ ಗಮನ ಹರಿಸಿದ್ದೇನೆ. ಉತ್ತಮ ಪ್ರದರ್ಶನ ನೀಡುವ ವಿಶ್ವಾಸ ಹೊಂದಿದ್ದೇನೆ’ ಎಂದರು.

# ಸಂಪ್ರದಾಯಿಕ ನಾಡಕುಸ್ತಿ



ದಸರಾ ನಾಡಕುಸ್ತಿ ಅಖಾಡದಲ್ಲಿ ಸ್ಪರ್ಧಿಗಳು

**ಸುರಭಿ.**

ಮೈಸೂರು; ಯುವಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಕರ್ನಾಟಕ ರೆಸ್ಲಿಂಗ್ ಅಸೋಸಿಯೇಷನ್ ಮತ್ತು ಕರ್ನಾಟಕ ಒಲಂಪಿಕ್ ಅಸೋಸಿಯೇಷನ್ ವತಿಯಿಂದ ದೇವರಾಜ ಅರಸು ವಿವಿದೊದ್ದೇಶ ಕ್ರೀಡಾಂಗಣದಲ್ಲಿ 10 ರಿಂದ 15ರವರೆಗೂ ನಡೆಯಲಿರುವ ಸಾಂಪ್ರದಾಯಿಕ ನಾಡ ಕುಸ್ತಿಗೆ ಬುಧವಾರ ಮುಖ್ಯಮಂತ್ರಿ ಹೆ.ಚ್.ಡಿ ಕುಮಾರಸ್ವಾಮಿ ಅವರಿಂದ ವಿದ್ಯುಕ್ತವಾಗಿ ಚಾಲನೆ ದೊರೆಯಿತು.

ಸ್ಪರ್ಧಾಥಿಗಳನ್ನು ಅಖಾಡದಲ್ಲಿ ಕೈಮಿಲಾಯಿಸುವ ಮೂಲಕ ಕಾರ್ಯಕ್ರಮ ಉಧ್ಘಾಟಿಸಿದ ಅವರು “ಗ್ರಾಮೀಣ ಕ್ರೀಡೆಗೆ ಹೆಚ್ಚಿನ ಪ್ರೋತ್ಸಾಹ ಅಗತ್ಯವಿದೆ. ದಸರೆಯ ಕುಸ್ತಿಗೆ ಸುಧೀರ್ಘ ಇತಿಹಾಸವಿದೆ. ಒಡೆಯರ ರಾಜಮನೆತನದಲ್ಲಿ ಕುಸ್ತಿಗೆ ವಿಶೇಷ ಪ್ರಾಮುಖ್ಯತೆ ಇದ್ದು ಕುಸ್ತಿ ಪಟುಗಳಿಗೆ ಹೆಚ್ಚಿನ ಪ್ರೋತ್ಸಾಹವಿತ್ತು. ಅಂದಿನಿಂದ ಇಂದಿನವರೆಗೂ ಕುಸ್ತಿ ತನ್ನದೇ ಮಹತ್ವಹೊಂದಿದ್ದು ವಿಶ್ವವಿಖ್ಯಾತವಾಗಿದೆ ಎಂದು ಕುಸ್ತಿ ಪಟುಗಳಿಗೆ ಶುಭಕೋರಿದರು”.

ಪ್ರಥಮವಾಗಿ ಅಖಾಡಕ್ಕೆ ಇಳಿದ ಉತ್ತರಪ್ರದೇಶ ಮಥುರಾದ ಮಾರ್ಫಿಟ್ ಕುಸ್ತಿಪಟು ಉಮೇಶ್ ಮತ್ತು ಮಹರಾಷ್ಟ್ರದ ಗೋಕುಲ್ ಉಸ್ತಾದ್ ಸೆಣೆಸಾಡಿದರು. 30ನಿಮಿಷಗಳಕಾಲ ಸಮಬಲಾಗಿ ಪಟ್ಟುಹಾಕುವುದರ ಮೂಲಕ ಕಾದಾಡಿದರು. ಕೊನೆಯದಾಗಿ ಉಮೇಶ್ ಗೆಲುವಿನ ಪತಾಕೆ ಹಾರಿಸಿದರು.

ಜಿಲ್ಲಾ ಉಸ್ತುವಾರಿ ಸಚಿವ ಜಿ.ಟಿ ದೇವೇಗೌಡ, ಸಚಿವರಾದ ಸಾ.ರಾ ಮಹೇಶ್, ಜಿಲ್ಲಾಧಿಕಾರಿ ಅಭಿರಾಂ ಜಿ ಶಂಕರ್, ಜಿಪಂ ಜ್ಯೋತಿ ಹಾಗೂ ಇತರ ಗಣ್ಯರು ಭಾಗವಹಿಸಿದ್ದರು.

### 408ರ ದಸರಾಗೆ ಪಂಜಿನ ಕವತ್ತಿನ ವಿದಾಯ

# ಕಣ್ಮನ ಸೆಳೆದ ಬೈಕ್, ಸ್ಟಂಟ್ ಪಂಜಿನ ಕವಾಯಿತ್ತು.

**ಕಿಶೋರ್ ಕುಮಾರ್.**

ಅಬ್ಬಾ! ಎಂತಹ ಬೈಕ್ ಸ್ಟಂಟ್, ಮಂತ್ರ ಮುಗ್ಧನಾಗಿಸುವ ಟೆಂಟ್ ಪೆಗ್ಗಿಂಗ್ ಬಾನಂಗಳದಲ್ಲಿ ಬಣ್ಣ ಬಣ್ಣದ ಚಿತ್ತಾರಗಳ ನರ್ತನ, ಪಂಜಿನಿಂದ ಮೂಡಿದ ವಿವಿಧ ಪದಮಾಲೆ. ದಸರಾದ ಕಡೆಯ ದಿನವಾದ ಶುಕ್ರವಾರ ಸಂಜೆ ನಗರದ ಪಂಜಿನ ಕವಾಯಿತು ಮೈದಾನದಲ್ಲಿ ಕಂಡುಬಂದ ದೃಶ್ಯಗಳಿವು. ಈ ರೋಮಾಂಚಕ ದೃಶ್ಯಗಳನ್ನು ಕಣ್ತುಂಬಿಕೊಂಡ 33000ಕ್ಕೂ ಅಧಿಕ ಮಂದಿ ಈ ಸಾಲಿನ ದಸರಾ ಮಹೋತ್ಸವಕ್ಕೆ ವಿದಾಯ ಹೇಳಿದರು. ನವರಾತ್ರಿಯ ಎಲ್ಲಾ ದಿನಗಳಲ್ಲೂ ಮಳೆಯಲ್ಲಿ ಮಿಂದಿದ್ದ ಜನಸಗರ ಬೈಕ್ ಸ್ಟಂಟ್ ಹಾಗೂ ಅಶ್ವಾರೋಹಿಗಳ ಸಾಹಸವನ್ನು ಕಂಡು ಶಿಳ್ಳೆ ಚಪ್ಪಾಳೆಗಳ ಸುರಿಮಳೆಯನ್ನೇ ಸುರಿಸಿದರು. ಈ ಹಿಂದೆ ಕೇವಲ 22000 ಮಂದಿಯಷ್ಟೇ ಕುಳಿತು ವೀಕ್ಷಿಸಬಹುದಾಗಿದ್ದ ಬನ್ನಿಮಂಟಪದ ಕವಾಯತು ಮೈದಾನವನ್ನು 33500 ಆಸನಗಳಿಗೆ ಹೆಚ್ಚಿಸುವ ಮುಡಾ ಕಾಮಗಾರಿಯು ಪೂರ್ಣಗೊಂಡ ಪರಿಣಾಮ ಈ ಬಾರಿ ಎಂದಿಗಿಂತಲೂ ಹೆಚ್ಚು ಮಂದಿ ಪಂಜಿನ ಕವಾಯತು ಪ್ರದರ್ಶನವನ್ನು ಕಣ್ತುಂಬಿಕೊಳ್ಳುವಂತಾಯಿತು.



ಪಂಜಿನ ಕವಾಯತು ಪ್ರದರ್ಶನ ನೀಡುತ್ತಿರುವುದ.

ನಾಯಕ್ ಸುಬೇದಾರ್ ಎನ್ ಕೆ.ತಿವಾರಿಯವರ ನೇತೃತ್ವದಲ್ಲಿ ಮಿಲಿಟರಿ ಪೋಲಿಸ್ ಕೊರ್‌ನ “ಶ್ವೇತಾಶ್ವ” ಮೋಟಾರ್ ಸೈಕಲ್ ತಂಡವು ಸುಮಾರು 20 ನಿಮಿಷಗಳ ಕಾಲ ನೋಡುಗರ ಎದೆ ಝಲ್ ಎನ್ನುವಂತೆ ತಮ್ಮ ಸಾಹಸ ಪ್ರದರ್ಶನಗಳನ್ನು ಮಾಡಿದರು. ತಮ್ಮ ಬೈಕ್ ಸ್ಟಂಟ್‌ಗಳ ಮೂಲಕ ಕಾರ್ಗಿಲ್ ವಿಜಯೋತ್ಸವವನ್ನು ವಿಶೇಷವಾಗಿ ಆಚರಿಸಿದರು. ತಿವಾರಿಯವರು ಬೆಂಕಿಯ ರಿಂಗ್‌ಗಳಲ್ಲಿ ಹಾದುಹೋದ ದೃಶ್ಯವಂತು ರೋಮಾಂಚನವನ್ನುಂಟು ಮಾಡಿತು.

ಟೆಂಟ್ ಪೆಗ್ಗಿಂಗ್: ಮೌಟೆಡ್ ಪೋಲಿಸರು ಸುಮಾರು 15 ನಮಿಷಗಳ ಕಾಲ ಪ್ರಸ್ತುತ ಪಡಿಸಿದ “ಟೆಂಟ್ ಪೆಗ್ಗಿ ಕಾರ್ಯಕ್ರಮ ನಿಜಕ್ಕೂ ನೋಡುಗರನ್ನು ಕಟ್ಟಿಹಾಕಿತು. ಹಾಸನ ಜಿಲ್ಲೆಯ ದಾಡೇನಹಳ್ಳಿ ಪೋಲಿಸ್ ಕೇಂದ್ರದ 300 ಪಂಜುಗಳನ್ನು ಹಿಡಿದು ಜಿಲ್ಲಾ ಸಶಸ್ತ್ರ ಮೀಸಲು ಪಡೆಯ ಹಿಮ್ಮೇಳದೊಂದಿಗೆ ವಿವಿಧ ದೈಹಿಕ ಕಸರತ್ತು ಮಾಡುವ ಮೂಲಕ ಈ ಸಾಲಿನ ದಸರಾಗೆ ಅರ್ಥಪೂರ್ಣ ವಿದಾಯ ಹೇಳಿದರು.

